ಸಂಪುಟ 01 | ಸಂಚಿಕೆ 23 | ಬುಧವಾರ 03 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**ವಿಶ್ವ ಅಂಗವಿಕಲರ ದಿನ**

ಪ್ರತಿ ವರ್ಷ ಡಿಸೆಂಬರ್ 3ರಂದು ವಿಶ್ವಸಂಸ್ಥೆಯ ಮೂಲಕ ಆಚರಿಸಲಾಗುತ್ತದೆ.ಅಂಗವಿಕಲರ ಹಕ್ಕುಗಳು, ಗೌರವ, ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳ ಬಗ್ಗೆ ಜಾಗೃತಿ ಮೂಡಿಸುವುದು.ಸಮಾಜದಲ್ಲಿ ಅಂಗವಿಕಲರನ್ನು ಸಂಪೂರ್ಣವಾಗಿ ಒಳಗೊಂಡಿಕೊಳ್ಳುವ ``Inclusive Society'' ನಿರ್ಮಿಸುವುದು.ಕ್ಷಣ, ಉದ್ಯೋಗ, ಆರೋಗ್ಯ, ಸಾರಿಗೆ, ತಂತ್ರಜ್ಞಾನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಪ್ರವೇಶಾರ್ಹತೆ (Accessibility) ಹೆಚ್ಚಿಸುವುದು.

**ರಾಷ್ಟ್ರೀಯ ಕೃಷಿ ಶಿಕ್ಷಣ ದಿನ (National Agriculture Education Day - India):** ಭಾರತದಲ್ಲಿ ಕೃಷಿ ಶಿಕ್ಷಣದ ಮಹತ್ವವನ್ನು ಎತ್ತಿ ಹಿಡಿಯಲು ಮತ್ತು ಕೃಷಿ ವಿಜ್ಞಾನದ ಪಿತಾಮಹರೆಂದೇ ಕರೆಯಲ್ಪಡುವ ಡಾ. ರಾಜೇಂದ್ರ ಪ್ರಸಾದ್ ಅವರ

**ವಿಶ್ವ ಸಂರಕ್ಷಣಾ ದಿನ (World Conservation Day):** ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಯ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ತೃಪ್ತಿ ಎನ್ನುವುದು ನಿಮ್ಮ ಪ್ರಯತ್ನಗಳಲ್ಲಿ ಇರುತ್ತದೆಯೇ ಹೊರತು ಸಾಧನೆಯಲ್ಲಿ ಅಲ್ಲ. ಪೂರ್ಣ ಪ್ರಮಾಣದ ಪ್ರಯತ್ನವೇ ಸಂಪೂರ್ಣವಾದ ಗೆಲುವು.

ಮಹಾತ್ಮಗಾಂಧಿ ರಾಷ್ಟ್ರಪಿತ

# ಐದು ಪಾಲಿಕೆಗಳಿಗೂ ಒಂದೇ ಮಾದರಿ ಪ್ರತ್ಯಾಯೋಜನೆ ಅಗತ್ಯ; ಎನ್‌ಆರ್‌ಆರ್

**ಚಿರಾಯು ಜ್ಞಾನಿ ಸುದ್ದಿ ಜಾಲ ಬೆಂಗಳೂರು:** ಗೊಂದಲಗಳ ಗೂಡಾಗಿರುವ ಬೆಂಗಳೂರು ಮಹಾನಗರದ ಐದು ನಗರ ಪಾಲಿಕೆಗಳಿಗೆ ಒಂದೇ ಮಾದರಿಯ ಅಧಿಕಾರ ಪ್ರತ್ಯಾಯೋಜನೆಯನ್ನು ರೂಪಿಸಬೇಕೆಂದು ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಆಗ್ರಹಿಸಿದ್ದಾರೆ. ಬಿಬಿಎಂಪಿಯನ್ನು ಅವೈಜ್ಞಾನಿಕವಾಗಿ ಐದು ನಗರ ಪಾಲಿಕೆಗಳನ್ನು ವಿಭಜನೆ ಮಾಡಿರುವುದನ್ನು ನೋಡಿದರೆ ಹುಚ್ಚು ದೊರೆ ಮಹಮದ್ ಬಿನ್ ತುಘಲಕ್ ನ ಆಡಳಿತದ ವೈಖರಿಯನ್ನೇ ನಾಚಿಸುವಂತಹ ಆಡಳಿತವನ್ನು ನೋಡುವ ದೌರ್ಭಾಗ್ಯ




ಬೆಂಗಳೂರು ಮಹಾನಗರದ ಜನತೆಯದ್ದಾಗಿದೆ ಎಂದು ಅವರು ಲೇವಡಿ ಮಾಡಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಐದು ನಗರ ಪಾಲಿಕೆಗಳಲ್ಲಿ ವಾಸ್ತವವಾಗಿ ಒಂದೇ ತೆರನಾದ ಆಡಳಿತ ವ್ಯವಸ್ಥೆ ಜಾರಿಗೆ ಬರಬೇಕಿತ್ತು. ಇದಾಗದಿರುವ ಹಿನ್ನೆಲೆಯಲ್ಲಿ ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಎಳೆಯಿತು ಎನ್ನುವ ಮಾತಿನಂತೆ ಒಂದೊಂದು ನಗರ ಪಾಲಿಕೆಯಲ್ಲಿ ಒಂದೊಂದು ಮಾದರಿಯ ಗೊಂದಲಮಯ ಅಧಿಕಾರ ಪ್ರತ್ಯಾಯೋಜನೆಗಳು ಜಾರಿಗೆ ಬಂದಿರುವುದರಿಂದ ಅಧಿಕಾರಿಗಳು, ನೌಕರರು ಮತ್ತು ಸಾರ್ವಜನಿಕರಲ್ಲಿ ಬಹಳಷ್ಟು ಗೊಂದಲಗಳು ಉಂಟಾಗಿವೆ.

4ನೇ ಪುಟಕ್ಕೆ

## ಕರ್ನಾಟಕ ರಾಜ್ಯದ ಬೆಳೆ ಸಮೀಕ್ಷೆದಾರರ ಹಿತಾಸಕ್ತಿ ಕಾಪಾಡಲು ಸರ್ಕಾರದ ಗಮನಕ್ಕೆ ತನ್ನಿ=ನಾಗರಾಜ ಎಸ್




ನೈಜ್ಯ ದೆಸೆ ನ್ಯೂಸ್

ದೇವದುರ್ಗ: ಕರ್ನಾಟಕ ಬೆಳೆ ಸಮೀಕ್ಷೆಗಾರರ ಸಂಘ ದೇವದುರ್ಗ ತಾಲ್ಲೂಕು ಮಟ್ಟದ ಪಿರ್ ವತಿಯೀಯಿಂದ ಇಂದು ಶಾಸಕರಾದ ಶ್ರೀ ಮತಿ ಕರೆಮ್ಮ ಜಿ ನಾಯಕ ರವಿಗೆ ಇಂದು ತಾಲೂಕ ಪಂಚಾಯತ ದೇವದುರ್ಗ ದಲ್ಲಿ ಬೆಳಗಾಂವಿ ಅಧಿವೇಶನದಲ್ಲಿ ಪಿರ್ ಗಳ ಪರ ಬೆಡಿಕೆಗಳು ಹಾಗೂ ನಮ್ಮ ಬಗ್ಗೆ ಧ್ವನಿ ಎತ್ತುವಂತೆ ಮನವಿ ಸಲ್ಲಿಸಲಾಯಿತು.


ರಾಜ್ಯದಲ್ಲಿ ನಾವು ಸುಮಾರು 8 ವರ್ಷಗಳಿಂದ ಬೆಳೆ ಸಮೀಕ್ಷೆದಾರರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ ಕಂದಾಯ ಇಲಾಖೆ ಕೃಷಿ ಇಲಾಖೆ ಹಾಗೂ ರೈತರ ನಡುವೆ ಕೊಂಡಿಯಾಗಿ ಶ್ರಮವಹಿಸಿ ಮಳೆಗಾಲ ಚಳಿಗಾಲ ಬೇಸಿಗೆ ಲೆಕ್ಕಿಸದೇ ಎದೆ ಎತ್ತರ ಬೆಳೆದ ಬೆಳೆಗಳ ಮಧ್ಯ ಹೋಗಿ ಜೀವ ಅಪಾಯದಲ್ಲಿ ಸಮೀಕ್ಷೆ ಕಾರ್ಯ ಮಾಡುವ ನಾವು ಅನೇಕ ತೊಂದರೆ ತಾಪತ್ರಯ ಅನುಭವಿಸುದ್ದೇವೆ ಹೀಗಾಗಿ ಬೆಳೆ ಸಮೀಕ್ಷೆದಾರರಿಗೆ ಮೂಲ ಸೌಕರ್ಯದ ಜೊತೆಗೆ ಸೀಮಿತ ಕಾರ್ಮಿಕರಾಗಿರುವ ನಮಗೆ ಕನಿಷ್ಠ ವೇತನ ನಿಗದಿ ಮಾಡಿ ದಿನಗೂಲಿ ಕಾರ್ಮಿಕರನ್ನಾಗಿ ನೇಮಕ ಮಾಡುವಂತೆ ನಮ್ಮ ಪರವಾಗಿ ಬರುವ ಚಳಿಗಾಲ ಬೆಳಗಾವಿ ಅಧಿವೇಶನದಲ್ಲಿ ತಾವು ಧ್ವನಿ ಎತ್ತಬೇಕೆಂದು ಮನವಿ ಸಲ್ಲಿಸಿದರು ಈ ಸಂದರ್ಭದಲ್ಲಿ ಅಧ್ಯಕ್ಷರು ನಾಗರಾಜ ಪಾಟೀಲ್, ಉಪಾಧ್ಯಕ್ಷರು ಹನುಮಂತ್ರಾಯ ದೊರೆ, ಪ್ರಧಾನ ಕಾರ್ಯದರ್ಶಿ ರಾಜು ಸಂಘಟನೆ ಸಹ ಕಾರ್ಯದರ್ಶಿ ಹನುಮೇಶ ನಾಯಕ ಮತ್ತು ನಿಂಗಯ್ಯ, ಚಂದ್ರು,ಚನ್ನಪ್ಪ, ಸಂಗಮೇಶ ,ಶಿವಪ್ಪ ಮತ್ತು ಇನ್ನಿತರರು ಭಾಗವಹಿಸಿದ್ದರು.

# ಬೂತಲದಿನ್ನಿ ಬ್ರಿಡ್ಜ್ ಕಾಮಗಾರಿಗೆ ಬೈಕ್ ಡಿಕ್ಕಿ ಸ್ಥಳದಲ್ಲೇ ಇಬ್ಬರು ದಾರುಣ ಸಾವು

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಬೂತಲದಿನ್ನಿ ಗ್ರಾಮದ ಹತ್ತಿರ ಸಿಂಧನೂರು ಮತ್ತು ಮಸ್ಕಿ ಹೆದ್ದಾರಿಯ ಬಳಿ ನಿರ್ಮಿಸಲಾಗುತ್ತಿರುವ ಬ್ರಿಡ್ಜ್ ನ ಹತ್ತಿರ ಸೋಮವಾರ ತಡರಾತ್ರಿ ಎರಡು ಜೀವಗಳು ಬಲಿಯಾಗಿವೆ. ತಡರಾತ್ರಿ ಲಿಂಗಸ್ಗೂರು ತಾಲೂಕಿನ ಹಿರೇನಗನೂರು ಹಾಗೂ ಯದ್ದಲದೊಡ್ಡಿ ಗ್ರಾಮದ ಬೈಕ್ ಸವಾರರು ಇಬ್ಬರು ಲಿಂಗಸ್ಗೂರಿಗೆ ಪ್ರಯಾಣಿಸುತ್ತಿದ್ದವರು ಏಕಾಏಕಿಯಾಗಿ ಕಾಮಗಾರಿ ನಡೆಯುತ್ತಿರುವ ಬ್ರಿಡ್ಜ್ ಗೆ ಡಿಕ್ಕಿ ಹೊಡೆದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.**

ವಿಷಯ ತಿಳಿದು ಸಂಚಾರಿ ಠಾಣೆಯ ಪೊಲೀಸರು ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಸಿಂಧನೂರು ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಕಳಿಸಿದ್ದಾರೆ. ನಂತರ ಮಂಗಳವಾರ ಕುಟುಂಬದ ಸದಸ್ಯರು ಠಾಣೆಗೆ ಬಂದು,



ಬ್ರಿಡ್ಜ್ ಕಾಮಗಾರಿ ಬಗ್ಗೆ ಹರಿಹಾಯ್ದರು.

ಈಗಾಗಲೇ ಬ್ರಿಡ್ಜ್ ಕಾಮಗಾರಿ ಪ್ರಾರಂಭವಾಗಿ ಹಲವು ಕಾರಣಗಳಿಂದ ವರ್ಷಗಳೇ ಕಳೆದರೂ ಕೂಡ ಇನ್ನೂ ಕಾಮಗಾರಿ ಪೂರ್ಣವಾಗಿಲ್ಲ. ಇನ್ನಷ್ಟು ಬಲಿಯಾಗುವ ಮುಂಚೆ ಜನಪ್ರತಿನಿಧಿಗಳು ಜೀವಹಾನಿಯಾಗುವುದು ತಪ್ಪಿಸಬೇಕಿದೆ. ಈ ದಿಶೆಯಲ್ಲಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ನೀಡಬೇಕು ಎಂದು ಸಾರ್ವಜನಿಕರು, ಕುಟುಂಬದವರು, ಆಕ್ರೋಶ ವ್ಯಕ್ತಪಡಿಸಿದರು.

## ತುಂಗಭದ್ರ ಆಣೆಕಟ್ಟು-ಅಧಿಕಾರಿಗಳೊಂದಿಗೆ ಸಚಿವ ಎನ್‌ಎಸ್ ಬೋಸರಾಜು ಸಭೆ ತ್ವರಿತಗತಿಯಲ್ಲಿ ಗೇಟ್ ಅಳವಡಿಸಲು ಸಚಿವ ಎನ್‌ಎಸ್ ಬೋಸರಾಜು ಸೂಚನೆ

ನೈಜ್ಯ ದೆಸೆ ನ್ಯೂಸ್

**ಮುನಿರಾಬಾದ್: ನಿಗದಿತ ಸಮಯದೊಳಗೆ ತುಂಗಭದ್ರಾ ಅಣೆಕಟ್ಟೆಯ ಕ್ರಸ್ಟ್ ಗೇಟ್ ಗಳನ್ನು ಅಳವಡಿಸಿ ರೈತರಿಗೆ ತೊಂದರೆಯಾಗದಂತೆ ತುಂಗಭದ್ರ ಬೋರ್ಡ್ ಮಂಡಳಿ ಹಾಗೂ ಅಧಿಕಾ-ರಿಗಳು ಜೂನ್ ಅಂತ್ಯದೊಳಗಾಗಿ ಗೇಟ್ ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಮುನಿರಾಬಾದ್ ನಲ್ಲಿ ನಡೆದ ತುಂಗಭದ್ರ ಆಣೆಕಟ್ಟಿನ ಕ್ರಸ್ಟ ಗೇಟ್ ಅಳವಡಿಸುವ ಕುರಿತ ಅಧಿಕಾರಿಗಳೊಂದಿಗೆ ಸಚಿವ ಎನ್-ಎಸ್ ಬೋಸರಾಜು ಅವರು ಸಭೆ ನಡೆಸಿದರು. ಈಗಾಗಲೆ 15 ಗೇಟ್ ಗಳು ರಡಿಯಾಗಿವೆ ಆಂದ್ರ ಪ್ರದೇಶ ಸರ್ಕಾರ ಈಗಾಗಲೆ 20 ಕೋಟಿ ಬಿಡುಗಡೆಗೊಳಿಸಿದೆ, ಕರ್ನಾಟಕ ಸರ್ಕಾರದಿಂದ 10 ಕೋಟಿ ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಇನ್ನು ಉಳಿದ 18 ಗೇಟ್ ಗಳನ್ನು ಗುತ್ತೆದಾರರು ತಕ್ಷಣ ತಯ್ಯಾರು ಮಾಡಿ, ಜೂನ್ ಅಂತ್ಯದೊಳಗೆ ಎಲ್ಲಾ ಗೇಟ್ ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು ತಾಂತ್ರಿಕ ಅಧಿಕಾರಿಗಳಿಗೆ ಸೂಚಿಸಿದರು. ಡಿಸೆಂಬರ್ 5 ರಂದು ಕ್ರಸ್ಟ ಗೇಟ್ ಮೇಲಿನ ಕ್ಯಾಪ್ ಗಳನ್ನು (ಮೇಲಿನ ಕವಚಗಳನ್ನು) ತೆಗೆಯುವ ಕೆಲಸ



ಪ್ರಾರಂಬಿಸಲಾಗುವುದು, ಎಂದು ತಾಂತ್ರಿಕ ಅಧಿಕಾ-ರಿಗಳು ಸಭೆಯಲ್ಲಿ ಸಚಿವರಿಗೆ ಮಾಹಿತಿ ನೀಡಿದರು.

ಆಂಧ್ರಪ್ರದೇಶ ನದಿ ಮುಖಾಂತರ ಸುಮಾರು 7 ಟಿಎಂಸಿಯಷ್ಟು ನೀರು ಹಾಗೂ ತೆಲಂಗಾಣಕ್ಕೆ 5 ಟಿಎಂಸಿ ನೀರು, ಒಟ್ಟಾರೆಯಾಗಿ 12 ಟಿಎಂಸಿ ನೀರು ನದಿ ಮುಕಾಂತರ ಹೊರ ಬಿಡಬೇಕಾಗಿದೆ ಈ ಕುರಿತು ತುಂಗಭದ್ರ ಬೋರ್ಡ್, ಆಂದ್ರ ಹಾಗೂ ತೆಲಂಗಾಣ ಸರ್ಕಾರದೊಂದಿಗೆ ಮಾತನಾಡಿ ನದಿ ಮುಖಾಂತರ ನೀರು ಬಿಡಲು ಕ್ರಮ ಕೈಗೊಳ್ಳಬೇಕು. ಗೇಟ್ ಗಳನ್ನು ಅಳವಡಿಸಲು ಮುಖ್ಯವಾಗಿ ಆಣೆಕಟ್ಟಿನಲ್ಲಿ ನೀರಿನ ಮಟ್ಟವನ್ನು ಕಡಿತಗೊಳಿಸಬೇಕು ಎಂದು ತಿಳಿಸಿದರು. ಕರ್ನಾಟಕ ಸರ್ಕಾರ ನಾಲೆಗಳ ದುರಸ್ತಿಗಾಗಿ ಹಣಕಾಸು ಇಲಾಖೆಗೆ ಹಣ ಮೀಸಲಿಡಲು ಪ್ರಸ್ತಾವನೆ ಸಲ್ಲಿಸಲಾಗಿದ್ದು. ಕ್ರಮೇಣವಾಗಿ ಗೇಟ್ ಜೊತೆಯಲ್ಲಿ ನಾಲೆಗಳ ದುರಸ್ತಿಗೂ ಸರ್ಕಾರ ಕ್ರಮ ಕೈಗೊಳ್ಳಬೇಕಿದೆ ಎಂದು ತಿಳಿಸಿದರು. ಅಲ್ಲದೆ ನಾಳೆ ಸಚಿವ ಎನ್‌ಎಸ್ ಬೋಸರಾಜು ಮತ್ತು ಶಿವರಾಜ ತಂಗಡಗಿ ಸೇರಿ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಸಂಬಂಧ ಪಟ್ಟ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಈ ಕುರಿತು ಚರ್ಚಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಮಲ್ಲಿಕಾರ್ಜುನ್ ನಾಗಪ್ಪ, ಮುಖ್ಯ ಕಾರ್ಯನಿರ್ವಾಹಕ ಅಭಿಯಂತರರಾದ ಲಕ್ಷ್ಮಣ ನಾಯಕ್, ಎಸ್ ಇ ಸತ್ಯನಾರಾಯಣ, ಶಾಂತರಾಜ್, ಇಇ ಗೋಡೆಕರ್, ಗಿರೀಶ್, ವಿಜಯಲಕ್ಷ್ಮಿ, ಕಾಂಗ್ರೆಸ್ ಮುಖಂಡರಾದ ಶಾಂತಪ್ಪ ದೊಡ್ಡಬಸಪ್ಪ ಗೌಡ, ಅಮರೇಗೌಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ರಾಯಚೂರು ಜಿಲ್ಲಾ ಸೈಬರ್ ಕೇಂದ್ರ ವಿಭಾಗದಿಂದ ಸೈಬರ್ ಕೇಂದ್ರ ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕೆ.ಪಿ.ಎಸ್.ವಿ,ಎಸ್,- ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆ ಸಭಾಂಗಣದಲ್ಲಿ ರಾಯಚೂರು ಜಿಲ್ಲಾ ಸೈಬರ್ ಕೇಂದ್ರ ವಿಭಾಗದಿಂದ ನಡೆದ ಸೈಬರ್ ಕೇಂದ್ರ ಜಾಗೃತಿ ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲಾ ಸೈಬರ್ ಕೇಂದ್ರ ವಿಭಾಗದ ಡಿ.ವೈ.ಎಸ್.ಪಿ. ವೆಂಕಟೇಶ್ ಹೊಗಿಬಂಡಿ ಮಾತನಾಡಿ ಇಂದು ಪ್ರತಿಯೋಬ್ಬರ ವೈಯುಕ್ತಿಕ ಹಾಗೂ ಖಾಸಗಿ ವಿಷಯಗಳು ಇಂದು ಖಾಸಗಿಯಾಗಿ ಉಳಿದಿಲ್ಲ ಅದ್ದಕ್ಕೆ ನಾವೇಲ್ಲರು ಬಳಸುತ್ತಿರುವ ಸಮಾಜಿಕ ಜಾಲತಾಣಗಳೆ ಕಾರಣ ಹಿಂದಿನ ದಿನಗಳಲ್ಲಿ ದರೋಡೆ,ಕಳ್ಳತನ ಪ್ರಕರಣಗಳಲ್ಲಿ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಹಣ ಮತ್ತು ಒಡವೆ ಕಳೆದುಕೊಳ್ಳುತ್ತಿದ್ದರು.**

ಅದರೆ ಇಂದಿನ ದಿನಗಳಲ್ಲಿ ಹೆಚ್ಚಿನ ಜನರು ಆಂಡ್ರಾಯ್ಡ್ ತಂತ್ರಜ್ಞಾನ ಉಳ್ಳ ಮೋಬೈಲ್ ಗಳನ್ನು ಬಳಸುತ್ತಿರುವುದರಿಂದ ಅಜ್ಞಾತ ವ್ಯಕ್ತಿಗಳು,ಅಜ್ಞಾತ ಸ್ಥಳಗಳಲ್ಲಿ ಕುಳಿತು ನಿಮ್ಮ ಬಳಿಯಿರುವ ಹಾಗೂ ಖಾತೆಗಳಲ್ಲಿರುವ ಹಣವನ್ನು ಹಾಗೂ ನಿಮ್ಮ ವೈಯುಕ್ತಿಕ ಬದುಕಿನ ಎಲ್ಲಾ ಮಾಹಿತಿಗಳನ್ನು ಸೈಬಾರ್ ಪ್ರಾಡ್‌ಸ್ರ?ಸ್ ಸುಲಭವಾಗಿ ಕದಿಯುತ್ತಿದ್ದಾರೆ ಹಾಗೂ ನಿಮ್ಮಗೆ



ಆರ್ಥಿಕ ನಷ್ಟದ ಜೊತೆಗೆ ವೈಯುಕ್ತಿಕ ಹಾಗೂ ಮಾನಸಿಕ,ಸಮಾಜಿಕ ಶೋಷಣೆ ಮಾಡುತ್ತಿರುವುದ-ರಿಂದ ಪ್ರತಿಯೊಬ್ಬರು ಕೂಡ ಸಮಾಜಿ-ಕ ಜಾಲತಾಣಗಳನ್ನು ಹಿತಮಿತವಾಗಿ ಬಳಸಬೇಕು ಯಾವುದೆ ಕಾರಣಕ್ಕೂ ಕೂಡ ನಿಮ್ಮ ವೈಯುಕ್ತಿಕವಾದ ಮಾಹಿತಿಯನ್ನು ಅಪರಿಚಿತರೊಂದಿಗೆ ಹಂಚಿ ಕೊಳ್ಳಬರದು, ನಿಮ್ಮಗೆ ಪೋನ್ ಮೂಲಕ ನಿಮ್ಮ ಖಾತೆಗೆ ಸಂಬಂಧಿಸಿದಂತೆ ಕೆ.ವೈ.ಸಿ, ಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಳ್ಳದೆ ನಿಮ್ಮ ಖಾತೆಯುಳ್ಳ ಬ್ಯಾಂಕ್‌ಗೆ ಹೋಗಿ ವೈಯುಕ್ತಿಕವಾಗಿ ನೀಡಬೇಕು ಯಾವುದೆ ಕಾರಣಕ್ಕೂ ದೂರವಾಣಿಯಲ್ಲಿ ಒ.ಟಿ.ಪಿ.ಸಂಖ್ಯೆಯನ್ನು ಹೇಳಬರಾದು, ಆನ್ಲೈನ್ ಚಾಟ್ ಮಾಡುವಾಗ ಜಾಗ್ರತೆಯಿಂದ ಇರಬೇಕು,ಆನ್ ಲೈನ್ ಶಾಪಿಂಗ್ ಮಾಡುವಾಗ ಎಚ್ಚರವಾಗಿರಬೇಕು ಹಾಗೂ ನಿಮ್ಮ ವೈಯುಕ್ತಿಕ ಮಾಹಿತಿ ನೀಡಬಾರದು, ಶಾಫಿಂಗ್ ಮಾಲ್ ಗಳಲ್ಲಿ ನಿಮ್ಮ ದೂರವಾಣಿ ಸಂಖ್ಯೆಯನ್ನು ನೀಡಬಾರದು.

ಕಾನೂನಿನಲ್ಲಿ ಡಿಜೀಟಲ್ ಅರೆಸ್ಟ್ಗೆ ಅವಕಾಶ ವಿಲ್ಲ ಅದ್ದರಿಂದ ಯಾರದರು ಡಿಜೀಟಲ್ ಅರೆಸ್ಟ್ ಹೆಸರಿನಲ್ಲಿ ವಂಚಿಸಿದಲ್ಲಿ ಹಣ ನೀಡದೆ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು, ಅನ್ ಲೈನ್ ಇನ್ವಸ್ಟ್ಮೆಂಟ್ ಆಫ್ ಗಳಲ್ಲಿ ಹಣ ಹೂಡಿಕೆ ಮಾಡಬಾರದು,ಪಾಲಕರು ತಮ್ಮ ಮಕ್ಕಳು ಆನ್ ಲೈನ್ ಗೇಮ್‌ಗಳಿಗೆ ಬಲಿಯಾಗದಂತೆ ನಿಗವಹಿಸಬೇಕು. ಆನವಶ್ಯಕವಾದ ಆಫ್ ಗಳನ್ನು ಡೌನ್ ಲೋಡ್ ಮಾಡಿಕೊಳ್ಳಬಾರದು,18 ವರ್ಷದೊಳಗಿನವರ ಆಶ್ಲಿಲ ಚಿತ್ರಗಳನ್ನು ನೋಡುವುದು ,ಹಂಚಿಕೊಳ್ಳುವುದು ,ಉಳಿಸಿಕೊಳ್ಳುವುದು ಕೂಡ ಅಪರಾಧವಾಗುತ್ತದೆ. ಅದ್ದರಿಂದ ಕೇಂದ್ರ ಸರ್ಕಾರವು ಸೈಬಾರ್ ಕೇಂದ್ರಗಳು ನಡೆಯದಂತೆ ತಡೆಯುವ ಉದ್ದೇಶದಿಂದ ಸಂಚಾರ ಸಾಥಿ, ಪೋರ್ಟಲ್ ರೆಮಿಡಿಸ್ ತಂತ್ರಾಂಶವನ್ನು ಮೋಬೈಲ್ ಗಳಲ್ಲಿ ಅಳವಡಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದೆ.

ನಿಮ್ಮಖಾತೆಯಲ್ಲಿ ಹಣ ಕಳೆದಿರುವದು ತಿಳಿಯುತ್ತಿದ್ದಂತೆ 1030 ಗೆ ಗೋಲ್ಡನ್ ಸಮಯದಲ್ಲಿ ಮಾಹಿತಿ ನೀಡಿದಲ್ಲಿ ನಿಮ್ಮ ಖಾತೆಯಿಂದ ಕದ್ದ ಹಣ ಬೇರೆ ಖಾತೆಗೆ ಹೊಗುವುದನ್ನು ತಡೆಯಬಹುದು ಹಾಗೂ ಬೇಗನೆ ತನಿಖೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ, ಮುಖ ಪರಿಚಯವಿಲ್ಲದೆ ಇರುವವರ ಬಳಿ ಚಾಟ್ ಮಾಡಬೇಡಿ ಮೋಡಿಗೆ ಒಳಗಾದ ನಂತರ ಹಾಗೂ ಅವರ ಕೋ-ರಿಕೆಯಂತೆ ನಗ್ನರಾದಲ್ಲಿ ನಿಮ್ಮ ನಗ್ನ ವಿಡಿಯೋ ಚಿತ್ರಿಕರಿಸಿಕೊಂಡು ಬ್ಲಾಕ್ ಮೇಲೆ ಮಾಡುತ್ತಾರೆ ಅದ್ದರಿಂದ ಯುವಕ ಯುವತಿಯರು ಸಾಮಾಜಿ-ಕ ಜಾಲತಾಣಗಳಲ್ಲಿ ಅಪರಿಚಿತರೊಂದಿಗೆ ಸ್ನೇಹವನ್ನು ಮಾಡುವಾಗ ಎಚ್ಚರವಯಿಸಬೇಕು .ಸೈಬರ್ ವಂಚನೆಗೆ ಒಳಗಾಗಬೇಡಿ,ಕ್ಲಿಕ್ ಮಾಡುವ ಮುನ್ನ ಅಲೋಚನೆ ಮಾಡಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೆ.ಪಿ.ಎಸ್.ವಿ,ಎಸ್,- ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಜೀನವೇಶ್ವರಯ್ಯ, ಉಪಪ್ರಚಾರ್ಯರಾದ ಡಾ.ಸುಮಂಗಲ. ಹೆಚ್. ಎಂ. ಹಾಗೂ ರಾಯಚೂರು ಜಿಲ್ಲಾ ಸೈಬರ್ ಕೇಂದ್ರ ವಿಭಾಗದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾಲೇಜಿನ ಉಪನ್ಯಾಸಕರು ಹಾಗೂ ವೈದ್ಯವಿದ್ಯಾರ್ಥಿಗಳು ಇದ್ದರು.

## ಸಾಹಿತ್ಯ ಸಿಂಚನ

ಕಟ್ಟಿದ ಜುಟ್ಟ ಕೇಶ ಬಿಚ್ಚಲಾರದೆ ?
ತೊಟ್ಟ ವೇಶ ಕಳಚಲಾರದೆ ?
ಬೆಳೆದ ಬೆಳೆ ಕೊಳೆಯಲಾರದೆ ?
ಹೊಳೆವ ಚಿನ್ನ ಹಳೆಯದಾಗದೆ?
ತುಂಬಿದ ಕೆರೆ ಬತ್ತಲಾರದೆ ?
ನಂಬಿದ ಧರೆ ಬಾಯ್ತರೆಯಲಾರದೆ ?
ಜಗದಲಿ ಯಾವುದು? ಶಾಶ್ವತ ಮನುಜ
ನಿನ್ನ ಸತ್ಕಾರ್ಯಗಳೆ ಹೊನ್ನ ಕಣಜ ಕೇಳಾ
ಎನ್ನ ಅಯ್ಯನಲ್ಲಿ ಭಕ್ತಿಯಿಟ್ಟು ಬಾಳ..

**ಪೂಜಮ್ಮ ನರಿ**

# HR ನೀತಿಗೆ ಗುತ್ತಿಗೆ–ಹೊರಗುತ್ತಿಗೆ ನೌಕರರ ಸಂಘಗಳ ವಿರೋಧ: ಬಸನಗೌಡ ಬಾದರ್ಲಿ MLC ಭೇಟಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿ.02 ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಂದ ನೂತನ ಮಾನವ ಸಂಪನ್ಮೂಲ ನೀತಿ ತಕ್ಷಣ ಹಿಂಪಡೆಯಲು ಸೂಕ್ತ ಕ್ರಮವಹಿಸಬೇಕು ಎಂದು ಎನ್.ಹೆಚ್.ಎಮ್ ಅಡಿಯಲ್ಲಿನ ಆರೋಗ್ಯ ಇಲಾಖೆ ಸಿಬ್ಬಂದಿಗಳು ಒತ್ತಾಯಿಸಿದರು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪ್ರಸ್ತಾಪಿಸಿರುವ ನೂತನ ಮಾನವ ಸಂಪನ್ಮೂಲ (ಊಖ) ನೀತಿಯನ್ನು ತಕ್ಷಣ ಹಿಂಪಡೆಯುವಂತೆ ಒತ್ತಾಯಿಸಿ ಇಂದು ಗುತ್ತಿಗೆ ನೌಕರರು ಆರೋಗ್ಯ ಇಲಾಖೆಯ ಗುತ್ತಿಗೆ–ಹೊರಗುತ್ತಿಗೆ ನೌಕರರ ಸಂಘಗಳು (KSHCOEA-BMS) ವಿಧಾನಪರಿಷತ್ ಸದಸ್ಯ ಬಸವನಗೌಡ ಬಾದರ್ಲಿ ರವರಿಗೆ ಮನವಿ ಪತ್ರ ನೀಡಿ ನೌಕರ ಸಹಾಯಕ್ಕೆ ಬರಲು ಒತ್ತಾಯಿಸಿದರು.**

ರಾಷ್ಟ್ರೀಯ ಆರೋಗ್ಯ ಅಭಿಯಾನ (NHM) ದಡಿಯಲ್ಲಿ ಸುಮಾರು 30 ಸಾವಿರ ಗುತ್ತಿಗೆ ನೌಕರರು 18–20 ವರ್ಷಗಳಿಂದ ಕಡಿಮೆ ವೇತನದಲ್ಲಿ ಯಾವೂದೆ ಸರ್ಕಾರಿ ನೌಕರರಿಗೆ ಸಿಗುವ ಭತ್ಯೆಗಳನ್ನು ಪಡೆಯದೆ ಸೇವೆ ಸಲ್ಲಿಸುತ್ತಿದ್ದು, ಹೊಸ ನೀತಿಯಡಿ ಕಡ್ಡಾಯ ವರ್ಗಾವಣೆ ಮತ್ತು ಮರು ನೇಮಕಾತಿ ಮಾಡಲಿರುವುದು ನೌಕರರ ಭವಿಷ್ಯಕ್ಕೆ ದೊಡ್ಡ ಹೊಡೆತವಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ದಶಕಗಳ ಸೇವೆಯ ನಂತರವೂ ನೌಕರಿಯ ಭರವಸೆ ನೀಡದೇ, ಮರು ನೇಮಕಾತಿಯ ಹೆಸರಿನಲ್ಲಿ ಮನೆಗೆ ಕಳುಹಿಸುವ ಹುನ್ನಾರ ನಡೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನೌಕರರ ನ್ಯಾಯಯುತ ಬೇಡಿಕೆಗಳಿಗೆ , ಹಿತಾಸಕ್ತಿಗೆ ಧಕ್ಕೆಯಾಗುವ ಕ್ರಮ ಕೈಗೊಳ್ಳದಂತೆ ಕ್ರಮಕ್ಕಾಗಿ ತಮ್ಮ



ಬೆಂಬಲ ಅವಶ್ಯಕ ವಿದೆ ಕಾರಣ ಬಡವರ ಬಂಧು ಮತ್ತ ಅನ್ಯಾಯದ ವಿರುದ್ಧ ಯಾವಾಗಲೂ ಧ್ವನಿ ಎತ್ತುವ ತಮ್ಮಗಳ ಬೆಂಬಲ ನಾವು ಬಯಸುತ್ತೇವೆ ಎಂದು ಸ್ಥಳಿಯ ಮುಖಂಡರಾದ ಎಫ್.ಎ.ಹಣ–ಗಿ,ತಿಪ್ಪೆಸ್ವಾಮಿ,ಡಾ.ಮೌನೇಶ ಪೂಜಾರ, ಹಾಗೂ ತ್ರಿವೇಣಿ ಭಂಡಾರಿ ಯವರು ಒತ್ತಾಯಿಸಿದರು.

ವಿಧಾನ ಪರಿಷತ್ ಸದಸ್ಯರಾದ ಬಸವನಗೌಡ ಬಾದರ್ಲಿ ಮಾತನಾಡಿ ನಿಮ್ಮ ಕಾರ್ಯಕ್ರಮವು ಬಹಳ ದಿನಗಳಿಂದ ನಡೆಯುತ್ತಿದ್ದು ಇದರ ಸಾಧನೆಗಳ ಬಗ್ಗೆ ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದು ಮತ್ತು ಸರ್ಕಾರದ ಮುಖ್ಯಸ್ಥರಿಗೆ ಪತ್ರ ಮುಖೇನ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಿ ಆಗುತ್ತಿರುವ ಅನ್ಯಾಯಕ್ಕೆ ಕಾಲಮಿತಿಯೊಳಗೆ ನ್ಯಾ ಕೊಡಿಸುವ ಕಾರ್ಯ ಮಾಡಲಾಗುವುದು ಯಾವೂದೆ ಕಾರಣಕ್ಕೂ ವಿಚಲಿತರಾಗದೆ ಪ್ರಾಮಾಣಿಕವಾಗಿ ನಿಮ್ಮ ನಿಮ್ಮ ಕಾರ್ಯ ನಿರ್ವಹಣೆಗೆ ಮುಂದಾಗಿ ಇಲ್ಲಿಯವರೆಗೆ ನಿಮಗೆಲ್ಲ ಆದ ಅನ್ಯಾಯ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.

ಶೇಕಡಾ 2% ಮಾತ್ರ ಗುತ್ತಿಗೆ ಸಿಬ್ಬಂದಿಗಳು ವರ್ಗಾವಣೆ ಬಯಸ್ಸಿದ್ದರೂ ಪ್ರಧಾನ ಕಾರ್ಯದರ್ಶಿಗಳು ಇದಕ್ಕೆ ಪರ್ಯಾಯ ಮಾರ್ಗ ಎಂಬಂತೆ ಎಲ್ಲಾ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಪುನಃ ನೇಮಕಾತಿ ಮಾಡಲು ಅವಕಾಶ ಇರುವಂತೆ ಪ್ರಸ್ತಾವನೆ ಸಲ್ಲಿಸಲು ಇಲಾಖೆಯಲ್ಲಿ ಒತ್ತಡ ತಂದಿರುವುದು ವಿಷಾದನೀಯ ಅವರ ಕಛೇರಿಯ ಪತ್ರದಲ್ಲಿ ಈ ವಿಷಯ ಎದ್ದು ಕಂಡಿರುತ್ತದೆ ಮತ್ತು ನೌಕರರು ನಿರ್ವಹಿಸುತ್ತಿರುವ ಅದೆ ಹುದ್ದೆಯಲ್ಲಿ ಮುಂದುವರೆಸುವ ಯಾವೂದೆ ಆದೇಶ/ಆಶ್ವಾಸನೆ ವಿಲ್ಲದೆ ಏಕಾ ಏಕಿ ತೆಗೆದುಹಾಕುವುದು ಸಮಂಜಸವಲ್ಲ ಮಾನ್ಯ ಆರೋಗ್ಯ ಸಚಿವರಿಗೆ ಖುದ್ದು ದೂರವಾಣಿ ಅಥ–'ವಾ ಭೇಟಿ ಮಾಡಿ ಪ್ರಸ್ತುತ ಆರೋಗ್ಯ ಇಲಾಖೆಯು ಉತ್ತಮವಾಗಿ ಸೇವೆ ನೀಡುತ್ತಿದ್ದು ದೇಶದಲ್ಲೇ ಆರೋಗ್ಯ ಸೇವೆ ನೀಡುವಲ್ಲಿ ಒಳ್ಳೆಯ ಸ್ಥಾನದಲ್ಲಿದೆ.

ಇನ್ನೂ ಉತ್ತಮ ಸ್ಥಾನಕ್ಕೆ ಏರಲು ಎಲ್ಲರೂ ಕೈ ಜೋಡಿಸಲು ನಿಮ್ಮ ಪರವಾಗಿ ಧ್ವನಿಯಾಗಿ ವಿವರಿಸಲಾಗುವುದು ಮತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಲ್ಲಿಯೂ ಸಿಬ್ಬಂದಿಗಳಿಗೆ ಮಾರಕ ಆಗುವಂತಹ ಯಾವುದೇ ವರದಿಗಳನ್ನು ಸರ್ಕಾರ ಒಪ್ಪಬಾರದು ಎಂದು ಕೋರಲಾಗುವುದು ಹಾಗೂ ಸರ್ಕಾರದ ಹೆಸರಿಗೆಮಸಿ ಬಳೆಯುವ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡುವಂತೆಯೂ ಸಹ ಕೇಳಿಕೊಳ್ಳುತ್ತೇನೆ ಎಜದರು ಸಿಬ್ಬಂದಿಗಳಿಗೆ ಮಾರಕ ಆಗುವಂತಹ ಹಾಗೂ ಸಿಬ್ಬಂದಿಗಳನ್ನು ಬೀದಿಗೆ ತಳ್ಳುವಂತಹ ಯಾವುದೇ ಅವೈಜ್ಞಾನಿಕ ವಿಧಾನಗಳನ್ನು ಅನುಸರಿಸದೆ ಬಡ ಮತ್ತು ಹಲವು ವರ್ಷಗಳಿಂದ ಸರ್ಕಾರಗಳ ಜೊತೆಗೆ ಹೆಲಿಗೆ ಹೆಗಲು ನೀಡಿ ಆರೋಗ್ಯ ಇಲಾಖೆಯನ್ನು ಸದ್ರಡಗೊಳಿಸಿದ ಇವರಿಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಂತ್ರಿಗಳು ಹಾಗೂ ಆರೋಗ್ಯ ಸಚಿವರು ನ್ಯಾಯ ವದಗಿಸಲು ಪತ್ರ ಮುಖೇನ ಮತ್ತು ಶೂನ್ಯ ವೇಳೆಯಲ್ಲಿ ಪ್ರಶ್ನೆಗಳನ್ನು ಚರ್ಚೆಗೆ ಎತ್ತಲು ಪ್ರಯತ್ನಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ನೌಕರರಾದಡಾ. ಮೌನೇಶ.ಪುಜಾರಿ ಆಯುಶ್ ವೈದ್ಯಾಧಿಕಾರಿಗಳು, ತಾಲೂಕಾ ವ್ಯವಸ್ಥಾಪಕಿ ಕು.ತ್ರಿವೇಣಿ, ತಿಪ್ಪೇರುದ್ರಪ್ಪ, ಸುಮಿತ್ರಾ ಹಿರೆಮಠ, ಅಕೌಂಟ್ ಅಸಿಸ್ಟಂಟ್ ದುರಗೇಶ , ಆರೋಗ್ಯ ಸಹಾಯಕಿ ಕು.ದುರ್ಗಾ, ಹ ಮೀದ,ಯಮನೂರಪ್ಪ,ಸುರೇಶ್ ರೆಡ್ಡಿ , ಸಂಗಮೇಶ ಹಾಗೂ ಪ್ರಸಾದ,ಹನುಮಂತಪ್ಪ , ಈರಣ್ಣ,ಮಲ್ಲಪ್ಪ, ತ್ರೇಜಾ,ರಾಜೇಶ್ವರಿ ದೇವೇಂದ್ರಪ್ಪ ಹಾಜರಿದ್ದರು

## ಮಾಡಸಿರವಾರ ಗ್ರಾಮದಲ್ಲಿ ಸರಕಾರಿ ಪ್ರೌಢ ಶಾಲಾ ಕಟ್ಟಡ ಉದ್ಘಾಟಿಸಿದ ಶಾಸಕ ಹಂಪನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಮೀಪದ ಮಾಡಸಿರವಾರ ಗ್ರಾಮದಲ್ಲಿ 2023–24ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಮೈಕ್ರೋ ಅನುದಾನದಲ್ಲಿ ಜಿಲ್ಲಾ ಪಂಚಾಯತ ರಾಯಚೂರು ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ ರಾಯಚೂರು ಮತ್ತು ಉಪ ವಿಭಾಗ ಸಿಂಧನೂರು. ಇವರ ಅನುಷ್ಠಾನದಲ್ಲಿ ಸರಕಾರಿ ಪ್ರೌಢ ಶಾಲಾ ಕಟ್ಟಡ ಶಾಸಕ ಹಂಪನಗೌಡ ಬಾದರ್ಲಿ ಅವರು ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದರು.



ಅಂದಾಜು ಮೊತ್ತ : 2.100.00 : ಒಟ್ಟು ಕೊಠಡಿಗಳ ಸಂಖ್ಯೆ–05 ಸಿಬ್ಬಂದಿಗಳ ಕೊಠಡಿ–1 ತರಗತಿ ಕೊಠಡಿಗಳು–3, ಮುಖ್ಯೋಪಾಧ್ಯಾಯರ ಕೊಠಡಿ–1 ನಿರ್ಮಾಣವಾಗಿದ್ದು .. ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ , ಖಾಜಿಮಲಿಕ್ ವಕೀಲರು , ನಾಗರಾಜ್ ಪ್ರಥಮ ದರ್ಜೆ ಗುತ್ತಿಗೆದಾದರು, ಎಸ್ ಡಿ ಎಂ ಸಿ ಅಧ್ಯಕ್ಷರು ಶಾಲೆಯ ಮುಖ್ಯೋಪಾಧ್ಯಾಯರು ಶಿಕ್ಷಕರು ಉಪಸ್ಥಿತರಿದ್ದರು.

## ಪರಿಸರವನ್ನು ನಾವು ಪ್ರೀತಿಸಿದರೆ, ಪರಿಸರವು ನಮ್ಮನ್ನು ಪ್ರೀತಿಸುತ್ತದೆ ಪರಶುರಾಮ ಮಲ್ಲಾಪುರ




❑ ನೈಜ್ಯ ದೆಸೆ ನ್ಯೂಸ್


ಸರ್ಕಾರಿ ಪದವಿಪೂರ್ವ ಕಾಲೇಜು ಅಲಬನೂ–ರಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಮೂರನೇ ದಿನದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಿಂಧನೂರು **ನೊಬೆಲ್ ಪದವಿ ಮಹಾವಿದ್ಯಾಲಯದ ಅಧ್ಯಕ್ಷರಾದ ಶ್ರೀ ಪರಶುರಾಮ ಮಲ್ಲಾಪುರ ಅವರು "ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ "ಪ್ರಕೃತಿಯೇ ನಮ್ಮ ಗುರು" ಹಾಗೂ ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಅದು ಮಾನವನ ಆಸೆಗಳನ್ನ ಪೂರೈಸುತ್ತದೆ ವಿನಃ ದುರಾಸೆಗಳನ್ನಲ್ಲ.**

ಆದ್ದರಿಂದ "ಪರಿಸರವನ್ನು ನಾವು ಪ್ರೀತಿಸಿದರೆ, ಪರಿಸರವು ನಮ್ಮನ್ನು ಪ್ರೀತಿಸುತ್ತದೆ" ಎಂದು ಎನ್ ಎಸ್ ಎಸ್ ಶಿಬಿರಾರ್ಥಿಗಳಿಗೆ ತಿಳಿಸಿದರು. ಈ ದಿನದ ಕಾರ್ಯಕ್ರಮದಲ್ಲಿ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ಮೌನೇಶ ಬಳಗನೂರು ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಕ್ಸ್ಫರ್ಡ್ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಶ್ರೇಷ್ಠಿ, ವಿಜಡಮ್ ಕಾಲೇಜಿನ ಶ್ರೀ ಆರ್ ಅನಿಲಕುಮಾರ, ಮಾಡಶಿರಿವಾರ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವೆಂಕಟೇಶ ಕುಲಕರ್ಣಿ, ಶ್ರೀ ಶಿವಯೋಗಿ ಚನ್ನಬಸವೇಶ್ವರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಾದ ಶ್ರೀ ರಾಮರೆಡ್ಡಿ ಹುಡಾ ಹಾಗೂ ಕಾಲೇಜಿನ ಉಪನ್ಯಾಸಕರಾದ ಕೆ.ಮಹಿಬೂಬ್, ಪಂಪಾಪತಿ ಕಲ್ಮಂಗಿ, ಶಂಕರಗೌಡ ಬೂತಲದಿನ್ನಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಯಾದ ಬಿ.ರವಿಕುಮಾರ ಸಾಸಲಮರಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಿಬಿರಾರ್ಥಿ ಜೆ. ಪುಷ್ಪಾ ಬೆಳಗುರ್ಕಿ ನಿರೂಪಿಸಿದರೆ, ಮಮತಾ ಬೆಳಗುರ್ಕಿ ಸ್ವಾಗತಿಸಿದರು ಹಾಗೂ ವೆಂಕಟೇಶ ಹರೇಟನೂರು ವಂದಿಸಿದರು.

## ಕವಿತಾಳದಲ್ಲಿ ಕನಕ ಮೂರ್ತಿಗೆ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಸೋಮವಾರ ಮಾಲಾರ್ಪಣೆ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣಕ್ಕೆ ಸೋಮವಾರ ಭೇಟಿ ನೀಡಿದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ಇಲ್ಲಿನ ಕನಕ ನಗರದಲ್ಲಿ ಭಾನುವಾರ ಅನಾವರಣಗೊಂಡ ಕನಕ ಮೂರ್ತಿಗೆ ಮಾಲಾರ್ಪಣೆ ಮಾಡಿದರು.**



ಮುಖಂಡರಾದ ಟಿ.ಮಲ್ಲಿಕಾರ್ಜುನಗೌಡ ಬಲ್ಲಟಗಿ, ಈರಣ್ಣ ಮರ್ಲಟ್ಟಿ, ನಾಗರಾಜ ಭೋಗಾವತಿ, ಯಮನಪ್ಪ ದಿನ್ನಿ, ಕರಿಯಪ್ಪ ದಿನ್ನಿ, ಶಿವನಪ್ಪ ದಿನ್ನಿ, ನಿಂಗಪ್ಪ ತೋಳ, ರಂಜಿತ್, ರುಕ್ಕುದ್ದೀನ್, ಮಾಜಿ ಪಟ್ಟಣ ಪಂಚಾಯಿತಿ ಸದಸ್ಯರು ಖಾಜಾಪಾಶಾ ಬ್ಯಾಗವಾಟ್, ಮಗ್ಗುಂ ಅಲೀ, ಸಣ್ಣ ಕಿರಿಲಿಂಗಪ್ಪ, ಲಕ್ಷ್ಮೀಪತಿ, ಲಾಳೇಶ ನಾಯಕ, ಸದ್ದಾಂ ಖುರೇಷಿ ಮತ್ತಿತರರು ಉಪಸ್ಥಿತರಿದ್ದರು.

## ಗ್ರಾಪಂ ಅಧಿಕಾರಿಗಳು ಜನರಿಗೆ ಸ್ಪಂದನೆ ಮಾಡಿ :ಶಾಸಕ ಆರ್. ಬಸನಗೌಡ ತುರ್ವಿಹಾಳ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಮಸ್ಕಿ ವಿಧಾನಸಭಾ ಕ್ಷೇತ್ರದ ಅಮೀನಗಡ, ವಟಗಲ್, ಪಾಮನಕಲ್ಲೂರು ಗ್ರಾಪಂ ವ್ಯಾಪ್ತಿಯಲ್ಲಿ ಮಂಗಳವಾರ ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್. ಬಸನಗೌಡ ತುರ್ವಿಹಾಳ ನೇತೃತ್ವದಲ್ಲಿ ಶಾಸಕರ ನಡೆ ಗ್ರಾಮ ಪಂಚಾಯತ್ ಕಡೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಪ್ರತಿಯೊಂದು ಗ್ರಾಮಗಳ ಸ್ವಚ್ಛತೆ ಹಾಗೂ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಆಯಾ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು. ಅಲ್ಲದೆ ಅಲ್ಲಿನ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಂಡು



ಪರಿಹರಿಸಲು ಕ್ರಮಗಳನ್ನು ಕೈಗೊಳ್ಳಬೇಕು ಕುಡಿಯುವ ನೀರು ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ನಿವಾರಣೆ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ, ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಮಹಿಬೂಬ್ ಸಾಬ್ ಮುದ್ದಾಪುರ, ಬಲವಂತರಾಯ ವಟಗಲ್, ಭೀಮೇಶ್ ನಾಯಕ್, ತಹಸೀಲ್ದಾರ್ ಮಂಜುನಾಥ ಭೋಗಾವತಿ,ತಾಲೂಕು ಪಂಚಾಯತ್ ಇಒ ಅಮರೇಶ ಯಾದವ, ಸೇ–ರಿದಂತೆ ವಿವಿಧ ಇಲಾಖೆಯ ಅಧಿಕಾ–ರಿಗಳು ಹಾಗೂ ಮುಖಂಡರು ಇದ್ದರು.

**ಹಿಲಾಲಪುರ ಗ್ರಾಮಕ್ಕೆ ಸಾರಿಗೆ ವ್ಯವಸ್ಥೆ ಮಾಡುವಂತೆ ಶಾಸಕರಿಗೆ ಮನವಿ**

**ಮಸ್ಕಿ ತಾಲೂಕಿನ ಹಿಲಾಲಪುರ ಗ್ರಾಮಕ್ಕೆ ಇವರೆಗೆ ಬಸ್ ಸೌಕರ್ಯ ಇಲ್ಲ ಇದರಿಂದ ಸಾಕಷ್ಟು ಸಮಸ್ಯೆ ಆಗುತ್ತಿದೆ ಆದ್ದರಿಂದ ನಮ್ಮ ಗ್ರಾಮಕ್ಕೆ ಸಾರಿಗೆ ವ್ಯವಸ್ಥೆ ಮಾಡುವಂತೆ ಶಾಸಕ ಆರ್. ಬಸನಗೌಡ ತುರ್ವಿಹಾಳ್ ಅವ–ರಿಗೆ ಗ್ರಾಮಸ್ಥರು ಮನವಿ ಮಾಡಿದರು. ಇದಕ್ಕೆ ತಕ್ಷಣ ಸ್ಪಂದನೆ ಮಾಡಿದ ಶಾಸಕರು ಮಸ್ಕಿ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಕರೆ ಮಾಡಿ ಗ್ರಾಮಕ್ಕೆ ಸಾರಿಗೆ ಸೌಲಭ್ಯ ಕಲ್ಪಿಸಿ ಕೊಡಿ ಎಂದು ಸೂಚನೆ ನೀಡಿದರು.**

## ಅಸ್ಕಾಹಾಳ, ಕೋಲ್ಡ್ ಸ್ಟೋರೇಜ್ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 02 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–1ರ ಶಾಖೆ–2ರಲ್ಲಿ ಎಲ್.ಟಿ ಲೈನ್‌ರೋಡ್ ವೈಡ್‌ನಿಂಗ್ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಡಿಸೆಂಬರ್ 3ರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆವರೆಗೆ ಅಸ್ಕಾಹಾಳ,**

ಕೋಲ್ಡ್ ಸ್ಟೋರೇಜ್ ಎದುರುಗಡೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386 ಅಥವಾ 08532–231999ಗೆ ಸಂಪರ್ಕಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಪ್ರಾಪ್ತ ಬಾಲಕಿಗೆ ಲೈಂಗಿಕ ದೌರ್ಜನ್ಯ ಪ್ರಕರಣ ಆರೋಪಿಗೆ 20 ವರ್ಷಗಳ ಕಠಿಣ ಶಿಕ್ಷೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆ ಸಿಂಧನೂರು ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 2023 ರಲ್ಲಿ ನಡೆದ ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಕ್ಕೆ ಸಂಬಂಧಿಸಿದಂತೆ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಪೋಕ್ಸೋ ನ್ಯಾಯಾಲಯ, ಪೀಠಾಸೀನ ಸಿಂಧನೂರು ನ್ಯಾಯಾಲಯವು 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ದಿನಾಂಕ 01–12–2025 ಆದೇಶ ನೀಡಿರುತ್ತಾರೆ.**

ಸಿಂಧನೂರು ನಗರದ ನಿವಾಸಿಯಾದ ಅಮೀನ್ ಸಾಬ್ ತಂದೆ ಮಕ್ಬೂಮ್ ಸಾಬ್ ಕಾಲೇಗರ್ ವಯಸ್ಸು:–43 ವರ್ಷ ಶಿಕ್ಷೆಗೆ ಗುರಿಯಾದ ಆರೋಪಿಯಾಗಿದ್ದಾನೆ. ನೊಂದ ಅಪ್ರಾಪ್ತ ಬಾಧಿತಳ ತಂದೆ ನೀಡಿದ ದೂ–ರಿನ ಮೇರೆಗೆ ಆರೋಪಿತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಅಂದಿನ ಆರಕ್ಷಕ ನಿರೀಕ್ಷಕರಾದ ಶ್ರೀ ದುರ್ಗಪ್ಪ ಇವರು ಆರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿದ್ದು ಇರುತ್ತದೆ.

ಮಾನ್ಯ ನ್ಯಾಯಾಲಯವು ಸಾಕ್ಷಿ ಪುರಾವೆಗಳನ್ನು ಪರಿಶೀಲಿಸಿ ಆರೋಪಿಯ ಮೇಲಿನ ಅಪಾದನೆ ಸಾಬೀತಾಗಿದೆ ಎಂದು 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಬಿ.ಬಿ. ಜಕಾತಿ ಯವರು ಶಿಕ್ಷೆ ವಿಧಿಸಿ ತೀರ್ಪು ನೀಡಿರುತ್ತಾರೆ. ಅದರಂತೆ ಆರೋಪಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ರೂ. 55,000/– ದಂಡವನ್ನು ವಿಧಿಸಲಾಗಿದೆ ಮತ್ತು ಸರ್ಕಾರದ ಸಂತ್ರಸ್ತರ ಪರಿಹಾರ ನಿಧಿಯಿಂದ ನೊಂದ ಬಾಲಕಿಗೆ ರೂ.7.50,000/–(ರೂ. ಏಳು ಲಕ್ಷದ ಐವತ್ತು ಸಾವಿರ ರೂ ಗಳ) ಪರಿಹಾರವನ್ನು ನೀಡಬೇಕೆಂದು ಮಾನ್ಯ ನ್ಯಾಯಾಲಯವು ಆದೇಶಿಸಿದೆ.

ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಎಂ. ಮಂಜುನಾಥ ರವರು ವಾದವನ್ನು ಮಂಡಿಸಿರುತ್ತಾರೆ. ಸಾಕ್ಷಿದಾರರನ್ನು ಮಾನ್ಯ ನ್ಯಾಯಾಲಯಕ್ಕೆ ಸಮಯಕ್ಕೆ ಸರಿಯಾಗಿ ಪೇದೆಗಳಾದ ಬೂದೆಪ್ಪ ಮತ್ತು ಶ್ರೀಮತಿ ಕೆಂಚಮ್ಮ ರವರು ಕರೆತಂದು ಸಹಕರಿಸಿರುತ್ತಾರೆ.

## ಮೇಣದ ಬತ್ತಿಯೊಂದಿಗೆ ಜಾಗೃತಿ ನಡಿಗೆ ಏಡ್ಸ್ ಜಾಗೃತಿ ಕಾರ್ಯಕ್ಕೆ ನಾವೆಲ್ಲ ಕೈಜೋಡಿಸೋಣ:ಸ್ಮೀತಾ ಅಕ್ಕ ಸಲಹೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 02 (ಕರ್ನಾಟಕ ವಾರ್ತೆ): ಆಕಸ್ಮಿಕವಾಗಿಯಾಗಲಿ ಅಥವಾ ಜೀವನದ ತಪ್ಪು ಹೆಜ್ಜೆಗಳಿಂದಾಗಲಿ ವ್ಯಕ್ತಿಯು ಹೆಚ್‌ಐವಿ ಸೋಂಕಿಗೆ ಒಳಗಾಗಿ ಜೀವನದ ಸುಂದರ ಕ್ಷಣಗಳನ್ನು ದೂರ ಮಾಡಿಕೊಳ್ಳುವ ದುರದೃಷ್ಟಕರ ಸನ್ನಿವೇಶಗಳಿಂದ ಪಾರಾಗಲು ಇರುವ ಸುರಕ್ಷತಾ ಕ್ರಮಗಳ ಜಾಗೃತಿ ಕಾರ್ಯಕ್ಕೆ ನಾವೆಲ್ಲರೂ ಕೈಜೊಡಿಸಬೇಕೆಂದು ಪ್ರಜಾಪೀತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸ್ಮೀತಾ ಅಕ್ಕ ಮನವಿ ಮಾಡಿದರು.**

ಡಿಸೆಂಬರ್ 01ರ ಸೋಮವಾರ ಸಂಜೆ ನಗರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಿಮ್ಸ್ ನರ್ಸಿಂಗ್




ಕಾಲೇಜು, ಡ್ಯಾಪ್ಕೋ ಹಾಗೂ ಹೊಸಬೆಳಕು ಸಂಸ್ಥೆ ಸಹಯೋಗದಲ್ಲಿ ಹೆಚ್‌ಐವಿ ಜಾಗೃತಿಯ ಮೇಣದ ಬತ್ತಿಯೊಂದಿಗೆ ಜಾಗೃತಿ ನಡಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಸಮುದಾಯದಲ್ಲಿ ಏಡ್ಸ್ ಪಸರಿಸದಂತೆ ಎಚ್ಚರ ವಹಿಸುವುದು ಮತ್ತು ಜನತೆಗೆ ತಿಳಿ ಹೇಳುವುದು ನಮ್ಮೆಲ್ಲರ ಮಹತ್ವದ ಕಾರ್ಯವಾಗಬೇಕಿದೆ. ಇದು ಒಬ್ಬರಿಂದ ಸಾಧ್ಯವಾದುದಲ್ಲ. ಯುವ ಜನತೆಯು ಇದರಲ್ಲಿ ಪ್ರಮುಖ ಪಾತ್ರ ವಹಿಸಬೇಕಿದೆ ಎಂದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು



ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಮತನಾಡಿ, ಕಳೆದ ನಾಲ್ಕು ದಶಕಗಳಿಂದ ಸರಕಾರವು ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ನಾನಾ ಕಾರ್ಯಕ್ರಮ ರೂಪಿಸಿದೆ. ಸೋಂಕಿಗೆ ಒಳಗಾದಾಗ ಅನುಭವಿಸುವ ಆರೋಗ್ಯ ಸಮಸ್ಯೆಗಳ ಗಂಭೀರತೆಯನ್ನು ಜನತೆಗೆ ಮನವರಿಕೆ ಮಾಡಿಕೊಡುತ್ತಿದೆ. ಹದಿಹರೆಯದವರ ಭವಿಷ್ಯದ ದೃಷ್ಟಿಯಿಂದ ಇಂದಿನಿಂದಲೇ ನಾವು ಜೀವನ ಜೋಪಾನಕ್ಕಾಗಿ ಅರಿವಿನ ಬತ್ತಿ ಹಚ್ಚೋಣವೆಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಂ ಎನ್, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಗಣೇಶ ಕೆ., ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ.ಶಿವಕುಮಾರ ನಾರಾ, ಮನೋವೈದ್ಯ ಡಾ.ಮನೋಹರ ಪತ್ತಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಜಿಲ್ಲಾ ಡ್ಯಾಪ್ಕೊ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ರಿಮ್ಸ್ ನರ್ಸಿಂಗ್ ಕಾಲೇಜಿನ ಬೋಧಕರಾದ ಸಂತೋಷಕುಮಾರ, ಹೊಸ ಬೆಳಕು ಸಂಸ್ಥೆಯ ಅಧ್ಯಕ್ಷ ಅಮರಯ್ಯ ಸ್ವಾಮಿ, ದೇವರಾಜ್, ಜಿಲ್ಲಾ ಕ್ಷಯರೋಗ ಮೇಲ್ವಿಚಾರಕರ ಅಮರೇಶ, ಎಂಟಿಎಸ್ ಸಂಧ್ಯಾ ಸೇರಿದಂತೆ ಕ್ಷಯರೋಗ, ಡ್ಯಾಪ್ಕೋ, ಎಆರ್‌ಟಿ ಸಿಬ್ಬಂದಿಯರು, ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿನಿಯರು ಇದ್ದರು.

## ನೇಮಕಾತಿ ಪ್ರಕಟಣೆ

THDC ನೇಮಕಾತಿ 2025: 45 ಸಹಾಯಕ ವ್ಯವಸ್ಥಾಪಕ, ಹಿರಿಯ ವೈದ್ಯಕೀಯ ಅಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ತೆಹ್ರಿ ಹೈಡ್ರೊ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ ಸೆಪ್ಟೆಂಬರ್ 2025 ರ THDC ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ವ್ಯವಸ್ಥಾಪಕ, ಹಿರಿಯ ವೈದ್ಯಕೀಯ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಕೊನೆಯ ದಿನಾಂಕ 31-ಅಕ್ಟೋಬರ್-2025 ರಂದು ಅಥವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು (ಕೊನೆಯ ದಿನಾಂಕ 06-ಡಿಸೆಂಬರ್-2025 ರವರೆಗೆ ಮತ್ತೆ ತೆರೆಯಿರಿ) THDC ನೇಮಕಾತಿ ಸಂಸ್ಥೆ ತೆಹ್ರಿ ಹೈಡ್ರೋ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ ಪೋಸ್ಟ್ ಹೆಸರು ಅಸಿಸ್ಟೆಂಟ್ ಮ್ಯಾನೇಜರ್, ಸೀನಿಯರ್ ಮೆಡಿಕಲ್ ಆಫೀಸರ್ ಖಾಲಿ ಹುದ್ದೆಗಳ ಸಂಖ್ಯೆ 45 ಹುದ್ದೆಗಳು ಅರ್ಹತಾ ಡಿಪ್ಲೊಮಾ, ಬಿ.ಎಸ್ಸಿ, ಬಿ.ಇ ಅಥವಾ ಬಿ.ಟೆಕ್, ಎಂಬಿಬಿಎಸ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06-ಡಿಸೆಂಬರ್-2025 https://thdc.co.in/hi/career/new-job-opening ಅಧಿಕೃತ ವೆಬ್‌ಸೈಟ್: thdc.co.in ಕೊನೆಯ ದಿನಾಂಕ: 06-ಡಿಸೆಂಬರ್-2025

## ರಾಷ್ಟ್ರೀಯ ಪಲ್ಸ್ ಪೋಲಿಯೋ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆ

❑ ನೈಜ್ಯ ದೆಸೆ ನ್ಯೂಸ್




ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿ .ಸಭಾಂಗಣದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ನಡೆದ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆಯಲ್ಲಿ ತಾಲೂಕು ಪಂಚಾಯಿತಿ ಇ.ಓ. ಪುರುರಾಜ್ ಸಿಂಗ್ ಸೋಲಂಕಿ ಐ.ಎ.ಎಸ್. ಮಾತನಾಡಿ ಪೋಲಿಯೋ ಕಾಯಿಲೆ ಒಮ್ಮೆ ಮಗುವಿನಲ್ಲಿ ಕಾಣಿಸಿಕೊಂಡಲ್ಲಿ ಮಗು ಅಂಗವಿಕಲವಾಗುತ್ತದೆ ಅದ್ದರಿಂದ ತಾಲೂಕು ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಗಂಭಿರವಾಗಿ ಪರಿಗಣಿಸಿ.

ತಾಲೂಕಿನ ಯಾವೊಂದು ಮಗು ಕೂಡ ಪೋಲಿಯೋ ಲಸಿಕೆಯಿಂದ ಹೊರ ಉಳಿಯದಂತೆ ಆರೋಗ್ಯ ಇಲಾಖೆಯೊಂದಿಗೆ ಸಹಕಾರ ನೀಡುವ ಮೂಲಕ ತಾಲೂಕಿನ 1ರಿಂದ 5ರ ಒಳಗಿನ ಪ್ರತಿಯೊಂದು ಮಗುವಿಗೂ ಕೂಡ ಪೋಲಿಯೋ ಲಸಿಕೆ ಹಾಕಿಸುವುದಕ್ಕೆ ಕ್ರಮ ಕೈಗೊಳ್ಳಬೇಕು ಪೋಲಿಯೋ ಲಸಿಕೆ ಹಾಕಿಸುವುದಕ್ಕೆ ನಿರಾಕರಿಸುವ ಪಾಲಕರ ಮನವೊಲಿಸಿ ಲಸಿಕೆಯನ್ನು ಹಾಕಿಸಬೇಕು.ಹೈರಿಸ್ಕ ಇರುವ ಬೂತ್ ಗಳಲ್ಲಿ ಅಂಗನವಾಡಿ ಕಾರ್ಯಕರ್ತರನ್ನು ನೇಮಕ ಮಾಡಲಾಗುವುದು ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ತೊಂದರೆ ಉಂಟಾದಲ್ಲಿ ಕೂಡಲೆ ತಾಲೂಕು ಆಡಳಿತದ ಗಮನಕ್ಕೆ ತರಬೇಕು.ಲಸಿಕೆಯನ್ನು ಶೀಥಿಲಕರಣ ಪೆಟ್ಟಿಗೆಯಲ್ಲಿ ಇಡಬೇಕಾಗಿರುವುದರಿಂದ ಜೆಸ್ಕಂ ಇಲಾಖೆ ಅಧಿಕಾರಿಗಳು ವಿದ್ಯುತ್ ನಿಲುಗಡೆಯಾಗದಂತೆ ಕ್ರಮ ಕೈಗೊಳ್ಳಬೇಕು, ಬಸ್ ನಿಲ್ದಾಣದಲ್ಲಿ ಮಕ್ಕಳಿಗೆ ಲಸಿಕೆ ಹಾಕುವುದಕ್ಕೆ ಕಲ್ಯಾಣ ಸಾರಿಗೆ ಇಲಾಖೆ ಅಧಿಕಾರಿಗಳು ಅಗತ್ಯ ಸೌಲಭ್ಯ ಕಲ್ಪಿಸಬೇಕು.

ಗ್ರಾಮೀಣ ಭಾಗದ ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಶಾಲಾ ಮಕ್ಕಳಿಂದ ಜಾಗೃತಿ ಜಾಥ ನಡೆಸಬೇಕು, ಅಂಗನವಾಡಿ ಕಾರ್ಯಕರ್ತರು ,ಆಶಾಕಾರ್ಯಕರ್ತರು ಲಸಿಕೆ ಹಾಕುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ತಾಲೂಕು ಆರೋಗ್ಯಧಿಕಾರಿ ಡಾ.ಶರಣಬಸವರಾಜ ಮಾತನಾಡಿ ಮಾನ್ವಿ ವಿಧಾನಸಭಾ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಡಿ.21 ರಂದು ಬೂತ್ ಡೆ ಅಂಗವಾಗಿ ಬೂತ್ ಗಳಲ್ಲಿ 1ರಿಂದ 5ರ ಒಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಾಗುವುದು.

R.22,23,24 ರಂದು ಪ್ರತಿ ಮನೆ ಮನೆಗೆ ಅಂಗನವಾಡಿ ಕಾರ್ಯಕರ್ತೆಯರು ಭೇಟಿ ನೀಡಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವುದಕ್ಕೆ ಕ್ರಮ ಕೈಗೊಳ್ಳಲಿದ್ದಾರೆ .ಮಾನ್ವಿ ಕ್ಷೇತ್ರದ ವ್ಯಾಪ್ತಿಯಲ್ಲಿ 5 ವರ್ಷದೊಳಗಿನ 47 ಸಾವಿರ ಮಕ್ಕಳನ್ನು ಗುರುತಿಸಲಾಗಿದ್ದು ಪೋಲಿಯೋ ಲಸಿಕೆ ಹಾಕುವುದಕ್ಕೆ ಒಟ್ಟು 221 ಬೂತ್ ಗಳ ವ್ಯವಸ್ಥೆ ಮಾಡಲಾಗಿದ್ದು442 ಸಿಬ್ಬಂದಿಗಳು 47 ಮೇಲ್ವಿಚಾರಕರು, 8 ಸಂಚಾರಿ ತಂಡಗಳ ವ್ಯವಸ್ಥೆ ಮಾಡಲಾಗಿದೆ. ಎಂದು ತಿಳಿಸಿದರು. ಸಭೆಯಲ್ಲಿ ಗ್ರೇಡ್2 ತಹಸೀಲ್ದಾರ್ ಅಬ್ದುಲ್ ವಾಹಿದ್, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ. ಸೇರಿದಂತೆ ಆರೋಗ್ಯ ಶಿಕ್ಷಣಾಧಿಕಾರಿಗಳು, ಆರೋಗ್ಯ ಸಿಬ್ಬಂದಿಗಳು ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

## ಅಲ್ಪಸಂಖ್ಯಾತರ ಇಲಾಖೆಯಿಂದ ಸರಳ ವಿವಾಹ ಸಹಾಯಧನಕ್ಕೆ ಅರ್ಜಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 02 (ಕರ್ನಾಟಕ ವಾರ್ತೆ): ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿನ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಗಳ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 50 ಸಾವಿರ ರೂ. ಸಹಾಯಧನಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಸರ್ಕಾರದ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 222 ರಲ್ಲಿ ಘೋಷಿಸಿರುವಂತೆ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಗಳ ವೆಚ್ಚಗಳಿಗಾಗಿ ನೀಡುವ ಕಾರ್ಯಕ್ರಮವನ್ನು ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಲಾದೆ. ಷರತ್ತುಗಳು: ಅರ್ಜಿ ಸಲ್ಲಿಸುವ ವಧು-ವರರು ಕರ್ನಾಟಕ ರಾಜ್ಯಕ್ಕೆ ಸೇರಿದ ಅಲ್ಪಸಂಖ್ಯಾತರ ಸಮುದಾಯಗಳಿಗೆ (ಮುಸ್ಲಿಂ, ಕ್ರಿಶ್ಚಿಯನ್,ಜೈನ್,ಬೌದ್ಧ, ಸಿಖ್ ಮತ್ತು ಪಾರ್ಸಿ) ಸೇರಿದವರಾಗಿರಬೇಕು. ಸಾಮೂಹಿಕ ವಿವಾಹಗಳಲ್ಲಿ ಕನಿಷ್ಠ 05 ಜೋಡಿಗಳು ಭಾಗವಹಿಸಿರತಕ್ಕದ್ದು. ಜಿಲ್ಲಾ ನೋಂದಣಿ/ವಕ್ಫ್ ಬೋರ್ಡ್ ಕಚೇರಿಗಳಲ್ಲಿ ಸಾಮೂಹಿಕ ವಿವಾಹಗಳ ಆಯೋಜಕರೆಂದು ನೋಂದಣಿಯಾಗಿರುವ ಖಾಸಗಿ ಟ್ರಸ್ಟಗಳು, ದೇವಸ್ಥಾನದ ಟ್ರಸ್ಟಗಳು, ಸಂಘಗಳು, ಸೊಸೈಟಿಗಳು ವಕ್ಫ ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳು ನಡೆಸುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ವಿವಾಹವಾದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಈ ಸೌಲಭ್ಯ ಪಡೆಯುವ ವಧುವಿಗೆ ಕನಿಷ್ಠ 18 ವರ್ಷದಿಂದ ಗರಿಷ್ಠ 42 ವರ್ಷಗಳು, ವರನಿಗೆ ಕನಿಷ್ಠ 21 ವರ್ಷದಿಂದ ಗರಿಷ್ಠ 45 ವರ್ಷ ವಯಸ್ಸು ಆಗಿರತಕ್ಕದ್ದು. ಈ ಯೋಜನೆಯಡಿ ಸಹಾಯಧನ ಪಡೆಯಲು ವಧು-ವರರ ವಾರ್ಷಿಕ ಆದಾಯವು 2.50 ಲಕ್ಷರೂ.ಗಳು ಮತ್ತು ಒಟ್ಟಾರೆಯಾಗಿ 5 ಲಕ್ಷ ರೂ.ಗಳನ್ನು ಮೀರತಕ್ಕದ್ದಲ್ಲ. ಈ ಸೌಲಭ್ಯವನ್ನು ಜೀವನದಲ್ಲಿ ಒಮ್ಮೆ ಮಾತ್ರ ಪಡೆಯಬಹುದಾಗಿದೆ. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಈ ಯೋಜನೆಯ ಸೌಲಭ್ಯ ನೀಡತಕ್ಕದ್ದು. ವರನಿಗೆ ಈಗಾಗಲೇ ಜೀವಂತ ಪತ್ನಿಯಿದ್ದಲ್ಲಿ ಅಥವಾ ವಧುವಿಗೆ ಜೀವಂತ ಪತಿ ಇದ್ದಲ್ಲಿ ಈ ಯೋಜನೆಯು ಅನ್ವಯಿಸುವುದಿಲ್ಲ. ಸದರಿ ಸಾಮೂಹಿಕ ವಿವಾಹವು ಇತರೆ ಜಿಲ್ಲೆಗಳಲ್ಲಿ ನಡೆದಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರು ದೃಡೀಕರಿಸುವುದು. ವಧು-ವರರು ಕನಿಷ್ಠ ಏಳು ದಿನ ಮುಂಚಿತವಾಗಿ ವಾಸ್ತವ್ಯವಿರುವ ಜಿಲ್ಲೆಯಲ್ಲಿಯೇ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿ ನಡೆಸಲಾಗುತ್ತಿದ್ದು, ಅದಾಗ್ಯೂ ಕೆಲವು ಸ್ವಯಂ ಸೇವೆ ಸಂಸ್ಥೆಗಳು ಮತ್ತು ಅರ್ಜಿದಾರರು ತಾಂತ್ರಿಕ ಕಾರಣಗಳಿಂದ ಆನ್‌ಲೈನ್ ಅರ್ಜಿ ಸಲ್ಲಿಸಲು ತೊಂದರೆ ಉಂಟಾದಲ್ಲಿ ಅಂತಹ ಸಂದರ್ಭದಲ್ಲಿ ಮಾತ್ರ ಅನುಮೋದಿತ ಆಫ್‌ಲೈನ್ ಅರ್ಜಿ ನಮೂನೆಗಳನ್ನು ಜಿಲ್ಲಾ ಅಥವಾ ತಾಲ್ಲೂಕು ಕಚೇರಿಯಿಂದ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಾಹಿತಿ ಕೇಂದ್ರಗಳಾದ ರಾಯಚೂರು: 9731028420, ದೇವದುರ್ಗ: 9148233616, ಲಿಂಗಸುಗೂರು: 9886447863, ಮಾನವಿ: 887334758 ಹಾಗೂ ಸಿಂಧನೂರು: 8217621732ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರವಿಕುಮಾರ ಪಾಟೀಲ್ ಹಾಗೂ ಶಿವಪ್ಪ, ನಾಗರಾಜ್ ವಕೀಲರಿಗೆ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕದಿಂದ ಸನ್ಮಾನ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕು ವಕೀಲರ ಸಂಘದ ಚುನಾವಣೆಯಲ್ಲಿ ಗೆಲವು ಸಾಧಿಸುವ ಮೂಲಕ ಎರಡನೇ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಪುನರಾಯ್ಕೆಯಾದ ರವಿಕುಮಾರ ಪಾಟೀಲ್ , ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶಿವಪ್ಪ ನಾಯಕ ಸುಂಕನೂರು,ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ನಾಗರಾಜ ನಾಯಕ ಗೂಗಲ್ ಅವರು ವಕೀಲರ ಚುನಾವಣೆಯಲ್ಲಿ ಗೆಲವು ಸಾಧಿಸಿದ ಅವರಿಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕ ಜಿಲ್ಲಾಧ್ಯಕ್ಷರಾದ ಶರಣಬಸವ ನಾಯಕ ಜಾನೇಕಲ್ ನೇತೃತ್ವದಲ್ಲಿ ಸನ್ಮಾನಿಸಲಾಯಿತು.**

ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡರಾದ ಬುಡ್ಡಪ್ಪನಾಯಕ,ತಿಮ್ಮನಗೌಡ ವಕೀಲರು ಯಲ್ಲಪ್ಪ ನಾಯಕ, ಮಹದೇವ ದದ್ದಲ್, ಅಂಬಣ್ಣ ನಾಯಕ,ಕೃಷ್ಣ ನಾಯಕ, ನಾಯ್ಡು , ಹನುಮೇಶ ನಾಯಕ, ಶಿವರಾಜ ಹರವಿ, ವಿನೋದ್ ನಾಯಕ, ,ಗಿರಿನಾಯಕ ,ನಾಗರಾಜ ನಾಯಕ, ಶ್ರೀಕಾಂತ್, ಚಂದ್ರು ದೊರೆ, ಬಸವ ನೀರಮಾನ್ವಿ, ಬಸವ ಜಾಟಗಲ್ ಹನುಮೇಶ ದೊರೆ ನೀರಮಾನ್ವಿ, ಹನುಮೇಶ ಜನತಾ ಹೌಸ್, ಚಿದಾನಂದ ನಾಯಕ, ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

## ಬೆಳಗಾವಿಯ ಅಧಿವೇಶನದಲ್ಲಿ ಪತ್ರಕರ್ತರ ರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನರವರು ಒತ್ತಾಯ

❑ ನೈಜ್ಯ ದೆಸೆ ನ್ಯೂಸ್



**ಬೆಂಗಳೂರಿನಲ್ಲಿ ಪತ್ರಿಕಾ ಹೇಳಿಕೆಯೊಂದನ್ನು ಬಿಡುಗಡೆಮಾಡಿದ ಅವರು ಸಮಾಜದಲ್ಲಾಗುವ ಅನ್ಯಾಯ, ಅಕ್ರಮ, ಅತ್ಯಾಚಾರ,ಭ್ರಷ್ಟಾಚಾರಗಳನ್ನು ತಡೆಹಿಡಿಯುವ ನಿಟ್ಟಿನಲ್ಲಿ ರಾಜ್ಯದ ಪತ್ರಕರ್ತರು ಜೀವದ ಹಂಗನ್ನೇ ತೊರೆದು ಹಗಲಿರುಳೆನ್ನದೆ ಸುದ್ದಿಸಂಗ್ರಹಿಸಿ ವರದಿಮಾಡುವ ಪತ್ರಕರ್ತರಿಗೆ ರಕ್ಷಣೆಯಿಲ್ಲದಂತಾಗಿದೆ.**

ಕಾರಣ ಈ ಬೆಳಗಾವಿಯ ಅಧಿವೇಶನದಲ್ಲಿ ಪತ್ರಕರ್ತರ ರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಬೇಕು,ಉಚಿತ ಬಸ್ ಪಾಸ್,ಆರೋಗ್ಯವಿಮೆ,ಮರಣಹೊಂದಿದರೆ ಹತ್ತುಲಕ್ಷ ರೂಪಾಯಿಗಳ ಪರಿಹಾರ, ಪತ್ರಿಕಾ ಭವನಗಳನ್ನು ಎಲ್ಲಾ ಪತ್ರಕರ್ತರಿಗೆ ಮುಕ್ತಗೊಳಿಸಬೇಕು ,ಮಾಶಾಸನ,ಪತ್ರಕರ್ತರ ಖಾಸಗಿ ವಾಹನಗಳಿಗೆ ಟೋಲ್ ಗೇಟಗಳಲ್ಲಿ ರಸ್ತೆಸುಂಕ ಇಲ್ಲದ ಸಂಚಾರಕ್ಕೆ ಅವಕಾಶ ನೀಡಬೇಕು,ವಿಧಾನಸೌಧ ವಿಕಾಸ ಸೌಧಗಳಲ್ಲಿ ಮುಕ್ತ ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿ ಇದೇ ತಿಂಗಳು ಹದಿನೈದನೆ ತಾರೀಕಿಗೆ ಬೆಳಗಾವಿಯ ಸುವರ್ಣಸೌಧದ ಮುಂದೆ ರಾಜ್ಯದ ಪತ್ರಕರ್ತರೆಲ್ಲ ಸೇರಿ ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ಹೇಳಿದರು. ಒಂದು ವೇಳೆ ಬೇಡಿಕೆ ಈಡೇರಿಸದಿದ್ದರೆ ಕಾನೂನಾತ್ಮಕ ಹೋರಾಟಕ್ಕೆ ಮುಂದಾಗಬೇಕಾಗುತ್ತದೆಂಬ ಎಚ್ಚರಿಕೆಯನ್ನು ನೀಡಿದರು.

## ಸಮಾಜದ ವಾಲ್ಮೀಕಿ ಮೂರ್ತಿ ನಿರ್ಮಾಣ, ಸದಸ್ಯತ್ವ ಅಭಿಯಾನಕ್ಕೆ ಮುಂದಾಗಿ: ತಿಮ್ಮಯ್ಯ ನಾಯಕ.



❑ ನೈಜ್ಯ ದೆಸೆ ನ್ಯೂಸ್

**ವಾಲ್ಮೀಕಿ ಮೂರ್ತಿ ನಿರ್ಮಾಣ ಮಾಡುವುದು ನಮ್ಮ ಸಮಾಜದ ಮೇಲಿರುವ ದೊಡ್ಡ ಜವಬ್ದಾರಿಯಾಗಿದೆ. ನಾವೆಲ್ಲರೂ ಒಟ್ಟಾಗಿ ಸಮಾಜದ ಈ ಮಹತ್ವ ಕೆಲಸಕ್ಕೆ ಮುಂದಾಗೋಣ, ಇತ್ತೀಚೆಗೆ ನಡೆದ ಹತ್ತಿಗುಡ್ಡ ಹಾಗೂ ಕುರುಕುಂದ ಗ್ರಾಮಗಳಲ್ಲಿ ನಾಯಕ ಸಮಾಜದ ಮೇಲಿನ ದೌರ್ಜನ್ಯವನ್ನು ಖಂಡಿಸುತ್ತೇವೆ ಎಂದು ತಿಮ್ಮಯ್ಯ ನಾಯಕ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿಂದು ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಇತ್ತೀಚೆಗೆ ನಡೆದ ಹತ್ತಿಗುಡ್ಡ ಹಾಗೂ ಕುರುಕುಂದ ಗ್ರಾಮಗಳಲ್ಲಿ ನಾಯಕ ಸಮಾಜದವರ ಮೇಲಿನ ದೌರ್ಜನ್ಯವನ್ನು ಖಂಡಿಸುತ್ತೇವೆ. ಇದನ್ನು ಪ್ರತಿ ಸಮಾಜದ ಹಿರಿಯರು ತಮ್ಮ ತಮ್ಮ ಸಮಾಜದ ಕಿಡಿಗೇಡಿಗಳಿಗೆ ಬುದ್ದಿ ಹೇಳಿ ಸಮಾಜದಲ್ಲಿ ಶಾಂತಿ ಕಾಪಾಡುವಲ್ಲಿ ಮುಂದಾಗಬೇಕು. ಹತ್ತಿಗುಡ್ಡ ಪ್ರಕರಣದಲ್ಲಿ ಸ್ಪಂದಿಸದಿರುವ ತುರ್ವಿಹಾಳ ಪೊಲೀಸ್ ಠಾಣೆ ಪಿಎಸ್ಐ ಅವರನ್ನು ಸೇವೆಯಿಂದ ಅಮಾನತು ಮಾಡಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸಮಾಜದ ಮುಖಂಡರು ಸಲ್ಲಿಸಿದ ಮನವಿಯಲ್ಲಿ ದೂರಿದ್ದಾರೆ.

ತಾಲೂಕಿನ ನಾಯಕ ಸಮಾಜದಿಂದ ನೋಂದಣಿ ಅಭಿಯಾನ ಪ್ರಾರಂಭವಾಗಿದೆ. ಸಮಾಜದ ಸಮಸ್ತ ನಾಗರೀಕರು ನೋಂದಣಿಗೆ ಮುಂದಾಗಿ, ಪೋಷಕ ಸದಸ್ಯತ್ವ 25 ಸಾವಿರ, ದಾನಿಗಳ ಸದಸ್ಯತ್ವ 11 ಸಾವಿರ, ಅಜೀವ ಸದಸ್ಯತ್ವ 5 ಸಾವಿರ, ತ್ರೈಮಾಸಿಕ ಸದಸ್ಯತ್ವ 1 ಸಾವಿರ, ಸದಸ್ಯತ್ವ ಶುಲ್ಕವನ್ನು ನಿಗಧಿ ಪಡಿಸಲಾಗಿದೆ. ಸದಸ್ಯತ್ವ ಅಭಿಯಾನ ಡಿ.8 ರಿಂದ ಮಾರ್ಚ್ 3 ರವರೆಗೆ ನೋಂದಣಿಗೆ ಕಾಲವಕಾಶವಿದೆ ಎಂದರು. ಈ ವೇಳೆ: ದೇವೇಂದ್ರಪ್ಪ ನಾಯಕ, ಕರೇಗೌಡ ಕುರುಕುಂದ, ಯಂಕೋಬ ರಾಮತ್ನಾಳ್, ವೆಂಕಟೇಶ ರಾಗಲಪರ್ವಿ, ಕನಕಪ್ಪ, ಹನುಮಂತ ಪುಲದಿನ್ನಿ, ಅರುಣಕುಮಾರ, ಲಕ್ಷ್ಮಣ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆ ಮತ್ತು ಡಿಜಿಟಲ್ ಅಪರಾಧಗಳ ತಡೆಗೆ ತುರ್ತು, ಪರಿಣಾಮಕಾರಿ ಮತ್ತು ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳುವ ಕುರಿತು ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ರವರಿಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸೋಲಿಡಾಡಿಟಿ ಯೂತ್ ಮೂವ್ಮೆಂಟ್ ಸಿಂಧನೂರು ಘಟಕದ ಪದಾಧಿಕಾರಿಗಳು ಮತ್ತು ಸದಸ್ಯರು ಇಂದು ,ಶ್ರೀ ಬಸನಗೌಡ ಬಾದರ್ಲಿ(ಶಾಸಕರು ,ವಿಧಾನ ಪರಿಷತ್ , ಕರ್ನಾಟಕ) ಅವರನ್ನು ಭೇಟಿಯಾಗಿ, ಬರುವ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಸೈಬರ್ ವಂಚನೆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಯನ್ನು ನಡೆಸುವಂತೆ ಹಾಗೂ ಈ ಕುರಿತು ಕಠಿಣ ಮತ್ತು ಪರಿಣಾಮಕಾರಿ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಿರುವ ಅಗತ್ಯವನ್ನು ಮನವಿ ಮಾಡಿದರು.**

ಇಂದಿನ ಡಿಜಿಟಲ್ ಯುಗದಲ್ಲಿ ಇಂಟರ್ನೆಟ್, ಆನ್‌ಲೈನ್ ಬ್ಯಾಂಕಿಂಗ್, ಯುಪಿಐ ಪಾವತಿ, ಸೋಷಿಯಲ್ ಮೀಡಿಯಾ ಮತ್ತು ಇ-ಕಾಮರ್ಸ್ ಸೇವೆಗಳು ನಮ್ಮ ದಿನನಿತ್ಯ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಸ್ಮಾರ್ಟ್ ಫೋನ್‌ಗಳ ವ್ಯಾಪಕ ಬಳಕೆ, ಡಿಜಿಟಲ್ ಜ್ಞಾನದ ಕೊರತೆ, ಅತಿಯಾದ ನಂಬಿಕೆ ಹಾಗೂ ತಾಂತ್ರಿಕ ಅರಿವಿನ ಕೊರತೆಯಿಂದ ಎಲ್ಲಾ ವಯೋಮಾನದ ಜನರು ಸೈಬರ್ ವಂಚನೆಗೆ ದೊಡ್ಡ ಪ್ರಮಾಣದಲ್ಲಿ ಬಲಿಯಾಗುತ್ತಿದ್ದಾರೆ. ಇದರಿಂದ ಸಾವಿರಾರು ಜನರು ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ ಹಾನಿಗೆ ಒಳಗಾಗುತ್ತಿದ್ದಾರೆ. ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳ ಗಂಭೀರತೆ ಕರ್ನಾಟಕವು ದೇಶದಲ್ಲಿ ಎರಡನೇ ಅತಿ ಹೆಚ್ಚು ಸೈಬರ್ ಅಪರಾಧಗಳು ನಡೆಯುವ ರಾಜ್ಯವಾಗಿದೆ. ಪ್ರಮುಖ ಅಂಶಗಳು: 1. ಪ್ರಕರಣಗಳು 2024ರಲ್ಲಿ: 22,472 ಪ್ರಕರಣಗಳು 2025 (ಜುಲೈ ವರೆಗೆ): 8,620 ಪ್ರಕರಣಗಳು 2. ವಂಚಕರ ಬಂಧನದ ಅತ್ಯಂತ ಕಡಿಮೆ ಪ್ರಮಾಣ 202400: 771 20 2025 (ಜುಲೈವರೆಗೆ): 357 ಬಂಧನ ಕಳೆದ ಎರಡು ವರ್ಷಗಳಲ್ಲಿ ಒಟ್ಟು ಕೇವಲ 23 ವಂಚಕರಿಗೆ ಮಾತ್ರ ಶಿಕ್ಷೆ ಇದರಿಂದ ಅಪರಾಧಿಗಳಿಗೆ ಅನುಕೂಲವಾಗುತ್ತಿದೆ.ನ

3. ಸಾರ್ವಜನಿಕರು ಕಳೆದುಕೊಂಡಿರುವ ಹಣ 2024 : ?2,515,48,49,720 2025 1,287,50,89,854 ವಶಪಡಿಸಿಕೊಂಡಿದ್ದು: 2024: 23,46,22,09,274 2025 () 21,09,36,47,238 ಇದು ಸರ್ಕಾರ ನೀಡಿದ ಕೇವಲ ಅಧಿಕೃತ ಮಾಹಿತಿ ಮಾತ್ರ. ಈ ಅಂಕಿ-ಅಂಶಗಳ ಹಿಂದೆ ನಿಜವಾಗಿ ಎಷ್ಟೋ ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಜನರ ಶ್ರಮಪಟ್ಟು ಗಳಿಸಿದ ಹಣ ವಂಚನೆಗೆ ಒಳಗಾಗುತ್ತಿದೆ. ಅನೇಕ ಪ್ರಕರಣಗಳು ದಾಖಲಾಗದೇ ಉಳಿಯುತ್ತಿವೆ; ಭಯ, ಲಜ್ಜೆ, ಹಾಗೂ ಕ್ರಮ ಕೈಗೊಳ್ಳುವಲ್ಲಿ ಆಗುವ ತೊಂದರೆಗಳಿಂದ ಜನರು ದೂರು ನೀಡದೇ ಮೌನವಾಗುತ್ತಾರೆ. ಆದ್ದರಿಂದ, ವಾಸ್ತವಿಕ ಹಾನಿಯ ಪ್ರಮಾಣ ಸರ್ಕಾರದ ಸಂಖ್ಯೆಗಳಿಗಿಂತ ಬಹಳ ಮಿಗಿಲಾಗಿದೆ.



ಸೈಬರ್ ಅಪರಾಧದ ಪ್ರಮಾಣ ಮತ್ತು ಅದರಿಂದ ಉಂಟಾಗುತ್ತಿರುವ ಆರ್ಥಿಕ ಹಾನಿ ರಾಜ್ಯದ ಪ್ರತಿ ಕುಟುಂಬಕ್ಕೂ ನೇರವಾಗಿ ತಲುಪುತ್ತಿರುವ ಗಂಭೀರ ಬೆದರಿಕೆಯಾಗಿದೆ. ಹಲವಾರು ನಾಗರಿಕರು ಕೋಟ್ಯಾಂತರ ಹಣ ಕಳೆದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಪ್ರಕರಣಗಳು ಹೆಚ್ಚುತ್ತಿವೆ ಇದು ನೈಬರ್ ಅಪರಾಧದ ಭಯಾನಕ ಸಾಮಾಜಿಕ ಆಯಾಮವನ್ನು ತೋರಿಸುತ್ತದೆ.

ಈ ಎಲ್ಲಾ ತಂತ್ರಗಳನ್ನು ಬಳಸಿಕೊಂಡು ನೈಬರ್ ಅಪರಾಧಿಗಳು ಜನರ ಬ್ಯಾಂಕ್ ಖಾತೆಗಳನ್ನು ಖಾಲಿ ಮಾಡುವುದು, ವೈಯಕ್ತಿಕ ಮಾಹಿತಿಯನ್ನು ದುರುಪಯೋಗ ಮಾಡುವುದು, ಬೆದರಿಕೆ ಹಾಕುವುದು, ಮಾನಹಾನಿ ಮತ್ತು ನಾಮಾಜಿಕ ಅಶಾಂತಿ ಉಂಟುಮಾಡುವಂತಹ ಗಂಭೀರ ಕೃತ್ಯಗಳನ್ನು ನಿರಂತರವಾಗಿ ನಡೆಸುತ್ತಿದ್ದಾರೆ. ಬೇಡಿಕೆಗಳು: 1. ಡಿಸೆಂಬರ್ 8/2025 ರಿಂದ ಪ್ರಾರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಇದನ್ನು ಚರ್ಚಿಸಿ ಕಠಿಣ ಕ್ರಮ ಕೈಗೊಳ್ಳಬೇಕು 2. ನೈಬರ್ ವಂಚನೆಯ ಪರಿಣಾಮವಾಗಿ ಜನರು ಕಷ್ಟಪಟ್ಟು ಕೂಡಿಟ್ಟ ಹಣವನ್ನು ಕಳೆದುಕೊಂಡು ಭಯಭೀತರಾಗುತ್ತಿದ್ದಾರೆ; ಕೆಲವರು ಆತ್ಮಹತ್ಯೆಗೆ ಸಹ ಶರಣಾಗುತ್ತಿದ್ದಾರೆ.

ಜನರ ಹಣದ ಭದ್ರತೆಗೆ ಸರ್ಕಾರವು ಸ್ಪಷ್ಟವಾದ ರಕ್ಷಣಾ ಕ್ರಮಗಳು ಮತ್ತು ಖಾತರಿಯನ್ನು ಒದಗಿಸಬೇಕು. 3. ಗೋಲ್ಡನ್ ಅವರ್‌ನ ಪ್ರಯೋಜನವನ್ನು ನಮರ್ಪಕವಾಗಿ ಬಳಸಲು ರಾಷ್ಟ್ರೀಯ ಮಟ್ಟದ ಸಹಾಯವಾಣಿಯ ಬದಲಿಗೆ ರಾಜ್ಯ ಸರ್ಕಾರವೇ ಪ್ರತ್ಯೇಕ ಸಹಾಯವಾಣಿ ಸಂಖ್ಯೆಯನ್ನು ಒದಗಿಸಬೇಕು. 4. ಸಾಮಾಜಿಕ ಜಾಲತಾಣಗಳ ಹ್ಯಾಕಿಂಗ್‌ನ್ನು ವಂಚನೆ ತಡೆಯಲು ಯುವಕರು ಹಾಗೂ ನಾಗರಿಕರಲ್ಲಿ ಜಾಗೃತಿ ಮೂಡಿಸಬೇಕು. ತಮ್ಮನ್ನೂ ಇತರರನ್ನೂ ರಕ್ಷಿಸುವ ಕ್ರಮಗಳ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕು. 5. ಸೋಲಿಡಾರಿಟಿ ಯೂತ್ ಮೂವ್ ಮೆಂಟ್ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸುಗಳು ಮತ್ತು ತಾಂತ್ರಿಕ ಸಲಹೆಗಳನ್ನು ಸಲ್ಲಿಸಲಿದೆ ಇದನ್ನು ತಕ್ಷಣ ವರಿಗಣಿಸಿಬೇಕು ಮತ್ತು ಅನುಷ್ಠಾನಗೊಳಿಸಬೇಕು ಡಿಜಿಟಲ್ ತಂತ್ರಜ್ಞಾನಗಳು ಜನಜೀವನವನ್ನು ಸುಗಮಗೊಳಿಸಿದರೂ, ಅವುಗಳ ದುರುವಯೋಗದಿಂದ ನಮಾಜದಲ್ಲಿ ಅವಾಯ, ಆತಂಕ ಮತ್ತು ಆರ್ಥಿಕ ಅಸ್ಥಿರತೆ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ಸೈಬರ್ ಅಪರಾಧಗಳ ವೇಗದ ಏರಿಕೆ ರಾಜ್ಯದ ಕಾನೂನು ಸುವ್ಯವಸ್ಥೆ, ಆಡಳಿತ ಯಂತ್ರ ಮತ್ತು ನಾರ್ವಜನಿಕ ಸುರಕ್ಷತೆಗೆ ದೊಡ್ಡ ಸವಾಲಾಗಿದೆ. ಜನರ ಹಣ, ಜೀವನ ಮತ್ತು ಭವಿಷ್ಯವನ್ನು ರಕ್ಷಿಸುವ ಜವಾಬ್ದಾರಿ ಸರ್ಕಾರದ ಮೇಲಾಗಿದ್ದು ಈಗಲೇ ಸೈಬರ್ ಅವರಾಧ ತಡೆಗೆ ಗಟ್ಟಿಯಾದ, ಪರಿಣಾಮಕಾರಿ ಮತ್ತು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ.ಡಿಜಿಟಲ್ ತಂತ್ರಜ್ಞಾನಗಳು ಜನಜೀವನವನ್ನು ಸುಗಮಗೊಳಿಸಿದರೂ, ಅವುಗಳ ದುರುವಯೋಗದಿಂದ ಸಮಾಜದಲ್ಲಿ ಅಪಾಯ, ಆತಂಕ ಮತ್ತು ಆರ್ಥಿಕ ಅಸ್ಥಿರತೆ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ಸೈಬರ್ ಅಪರಾಧಗಳ ವೇಗದ ಏರಿಕೆ ರಾಜ್ಯದ ಕಾನೂನು-ನುವ್ಯವಸ್ಥೆ, ಆಡಳಿತ ಯಂತ್ರ ಮತ್ತು ಸಾರ್ವಜನಿಕ ಸುರಕ್ಷತೆಗೆ ದೊಡ್ಡ ನವಾಲಾಗಿದೆ. ಜನರ ಹಣ, ಜೀವನ ಮತ್ತು ಭವಿಷ್ಯವನ್ನು ರಕ್ಷಿಸುವ ಜವಾಬ್ದಾರಿ ಸರ್ಕಾರದ ಮೇಲಾಗಿದ್ದು ಈಗಲೇ ನೈಬರ್ ಅವರಾಧ ತಡೆಗೆ ಗಟ್ಟಿಯಾದ, ಪರಿಣಾಮಕಾರಿ ಮತ್ತು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ. ಎಂದು ತಿಳಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ಪಂಚಕರ್ಮ

MD ಪಂಚಕರ್ಮ (ಆಯುರ್ವೇದ) ಒಂದು ಸ್ನಾತಕೋತ್ತರ ಪದವಿಯಾಗಿದ್ದು MD Panchakarma ಎಂದರೆ ಆಯುರ್ವೇದದ ಶರೆರ ಶೋಧನ ಪುನರ್ಜೀವನ (rejuvenation) ವಿಷಯದಲ್ಲಿ ಸ್ನಾತಕೋತ್ತರ ಪದವಿ, ಆಯುರ್ವೇದ ಚಿಕಿತ್ಸೆ ಮತ್ತು ನಿರ್ವಿಷಕಾರಿ ವಿಧಾನಗಳ ಮೇಲೆ ಕೇಂದ್ರೀಕರಿಸುತ್ತದೆ. ಎಂಡಿ (ಆಯುರ್ವೇದ) ಪಂಚಕರ್ಮದಲ್ಲಿ ಸ್ನಾತಕೋತ್ತರ ಪದವಿ (ಪಿಜಿ) ಆಯುರ್ವೇದ ಚಿಕಿತ್ಸೆಗಳು ಮತ್ತು ನಿರ್ವಿಶೀಕರಣ ಚಿಕಿತ್ಸೆಗಳ ಮೇಲೆ ಕೇಂದ್ರೀಕರಿಸುವ ಒಂದು ಮುಂದುವರಿದ ಪದವಿಯಾಗಿದೆ. ಇದು ಪಂಚಕರ್ಮದಲ್ಲಿ ಪರಿಣತಿ ಹೊಂದಿದೆ, ಇದು ದೇಹವನ್ನು ಶುದ್ಧೀಕರಿಸಲು ಮತ್ತು ಪುನರ್ಯೌವನಗೊಳಿಸಲು ಐದು ಚಿಕಿತ್ಸಕ ವಿಧಾನಗಳನ್ನು ಒಳಗೊಂಡಿರುವ ಆಯುರ್ವೇದದ ಪ್ರಮುಖ ಶಾಖೆಯಾಗಿದೆ. ಈ ಕೋರ್ಸ್ ಸಾಮಾನ್ಯವಾಗಿ 3 ವರ್ಷಗಳವರೆಗೆ ಇರುತ್ತದೆ ಮತ್ತು ಪಂಚಕರ್ಮದ ತತ್ವಗಳು, ತಂತ್ರಗಳು ಮತ್ತು ವೈದ್ಯಕೀಯ ಅನ್ವಯಿಕೆಗಳನ್ನು ಪರಿಶೀಲಿಸುತ್ತದೆ. ಇದು ವಾಮನ (ವಾಂತಿ), ವಿರೇಶನ (ಶುದ್ಧೀಕರಣ), ಬಸ್ತಿ (ಎನಿಮಾ), ನಾಸ್ಯ (ಮೂಗಿನ ಆಡಳಿತ) ಮತ್ತು ರಕ್ತಮೋಕ್ಷನ (ರಕ್ತಸ್ರಾವ) ಸೇರಿದಂತೆ ವಿವಿಧ ನಿರ್ವಿಶೀಕರಣ ಚಿಕಿತ್ಸೆಗಳನ್ನು ಒಳಗೊಂಡಿದೆ., ಇದರಲ್ಲಿ ಪಂಚಕರ್ಮದ ತತ್ವಗಳು, ತಂತ್ರಗಳು ಮತ್ತು ವೈದ್ಯಕೀಯ ಅನ್ವಯಗಳನ್ನು ಅಧ್ಯಯನ ಮಾಡಲಾಗುತ್ತದೆ. ಕೋರ್ಸ್ ಪೂರ್ಣಗೊಳಿಸಿದ ನಂತರ, ವಿದ್ಯಾರ್ಥಿಗಳು ಆಯುರ್ವೇದ ತಜ್ಞರಾಗಿ ಕೆಲಸ ಮಾಡಬಹುದು. Panchakarma" ಎನ್ನುವುದು ಆಯುರ್ವೇದದಲ್ಲಿ ದೇಹವನ್ನು ಶುದ್ಧಗೊಳಿಸುವ ಮತ್ತು ಪುನಃಜೀವಗೊಳಿಸುವ ಚಿಕಿತ್ಸಾ (detoxification & rejuvenation) ಪದ್ಧತಿಗಳ ಸಂಕಲನ. ಪಂಚಕರ್ಮದ ತತ್ವಗಳು, ಚಿಕಿತ್ಸೆಗಳು, ಮತ್ತು ಅನ್ವಯಗಳು. ಆಯುರ್ವೇದದ ಮೂಲ ಪರಿಕಲ್ಪನೆಗಳು, ಚಿಕಿತ್ಸಾ ವಿಧಾನಗಳು ಮತ್ತು ಅವುಗಳ ವೈದಕೀಯ ಅನ್ವಯಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ನೀಡುತ್ತದೆ. ಸ್ನೇಹನ,ಸ್ವೇದನ,ವಮನ,ವಿರೇಚನ,ಬಸ್ತಿ, ನಸ್ಯ, ರಕ್ತಮೋಕ್ಷಣ ಇವುಗಳ ಸಂಯೋಜನೆ ದೇಹದ ಮೇಲಿನ ದೋಷ, ಧಾತು, ಮಲ, ಸ್ರೋತಸ್ಸುಗಳಲ್ಲಿರುವ *ಆಮ (toxin)*ಗಳನ್ನು ಹೊರಹಾಕಿ ದೇಹವನ್ನು ಪುನರ್‌ಜೀವಂತಗೊಳಿಸುತ್ತದೆ. ಪಂಚಕರ್ಮ ಚಿಕಿತ್ಸೆ ಮೂಲಕ ದೇಹದ ಕೆಳಗಿನ 13 ಸ್ರೋತಸ್ಸುಗಳಲ್ಲಿ ಶುದ್ಧೀಕರಣ ಮತ್ತು ಸಮತೋಲನ ಸಾಧಿಸಲಾಗುತ್ತದೆ ಅನ್ನವಾಹ ಸ್ರೋತಸ್ ,ಆಹಾರ ಜೀರ್ಣ / ಪಾಚಕ ವ್ಯವಸ್ಥೆ ಜಠರ, ಅಮಾಶಯ, ಅನ್ತ್ರಗಳು 2ಪ್ರಾಣವಾಹ ಸ್ರೋತಸ್ ಉಸಿರಾಟ / ಶ್ವಾಸಕೋಶ ಹೃದಯ + ಶ್ವಾಸಮಾರ್ಗ 3 ಉದಕವಾಹ / ಅಂಬು ವಹ ಸ್ರೋತಸ್ ದೇಹದ ದ್ರವ ಸಮತೋಲನ ಜಲ, ಲೇವ, ವ್ಯವಸ್ಥೆ 4 ರಸವಾಹ ಸ್ರೋತಸ್ ದೇಹದ ಮೊದಲ ಧಾತು (ರಸ ಧಾತು) ಸನಾಳಗಳು, ಲಿಂಫಾಟಿಕ್ ವ್ಯವಸ್ಥೆ 5 ರಕ್ತವಾಹ ಸ್ರೋತಸ್ ರಕ್ತ ಪರಿವಹಣ, ಹೃದಯ, ರಕ್ತನಾಳಗಳು 6 ಮಾಂಸವಾಹ ಸ್ರೋತಸ್ ಸ್ನಾಯು / ಮಸಲ್ ವ್ಯವಸ್ಥೆ 7 ಮೆದೋವಾಹ ಸ್ರೋತಸ್ ಕೊಬ್ಬು, ಲಿಪಿಡ್ ಮಬಾಲಿಸಂ 8 ಅಸ್ಥಿವಾಹ ಸ್ರೋತಸ್ ಎಲುಬು / 9 ಮಜ್ಜಾವಾಹ ಸ್ರೋತಸ್ ನರಜಾಲ ಶುಕ್ರವಾಹ ಸ್ರೋತಸ್ ಪುರುಷ ಜನನಾಂಗ 1 ಆರ್ತವವಾಹ ಸ್ರೋತಸ್ ಸ್ತ್ರೀ ಜನನಾಂಗ ಮೀನ್ಸ್ಟ್ರುವಲ್ 12 ಮಲವಾಹ ಸ್ರೋತಸ್ ಮಲ ತೆರವು ಮಲ / ಮೂತ್ರ / ಬೆವರಿನ ಮಾರ್ಗಗಳು 13 ಮನೋವಾಹ ಸ್ರೋತಸ್ ಮನಸ್ಸು, ಭಾವನೆ, ಚಿಂತನೆಗಳ ಮಾರ್ಗ ಮನೋದೇಹ ಸಂಪರ್ಕ ಚಾನೆಲ್‌ಗಳು

## ಲಿಂಗಸೂಗೂರು, ಹಟ್ಟಿಯಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಪ್ರವಾಸ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 02 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರು ಡಿಸೆಂಬರ್ 3ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.**

ಡಿಸೆಂಬರ್ 3ರ ಬೆಳಿಗ್ಗೆ 7 ಗಂಟೆಗೆ ಕಲಬುರಗಿ ನಗರದಿಂದ ನಿರ್ಗಮಿಸಿ ಬೆಳಿಗ್ಗೆ 11ಕ್ಕೆ ರಾಯಚೂರು ಜಿಲ್ಲೆಯ ಲಿಂಗಸುಗೂರು ನಗರಕ್ಕೆ ಆಗಮಿಸಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಮಧ್ಯಾಹ್ನ 1.30ಕ್ಕೆ ಲಿಂಗಸುಗೂರದಿಂದ ನಿರ್ಗಮಿಸಿ, ಮಧ್ಯಾಹ್ನ 2 ಗಂಟೆಗೆ ಹಟ್ಟಿ ಚಿನ್ನದ ಗಣಿ ಪ್ರದೇಶಕ್ಕೆ ಆಗಮಿಸಿ ಮಹಿಳಾ ಕಾರ್ಮಿಕರೊಂದಿಗೆ ಸಂವಾದ ನಡೆಸುವರು. ಮಧ್ಯಾಹ್ನ 3.30ಕ್ಕೆ ಹಟ್ಟಿಯಿಂದ ನಿರ್ಗಮಿಸಿ ಲಿಂಗಸೂರಗೆ ತೆರಳಿ ಸಂಜೆ 4 ಗಂಟೆಗೆ ಲಿಂಗಸಗೂರು ಪೊಲೀಸ್ ಠಾಣೆಗೆ ಭೇಟಿ ನೀಡುವರು. ಬಳಿಕ ಲಿಂಗಸುಗೂರಿನ ಸಮಾಜ ಕಲ್ಯಾಣ ಇಲಾಖೆಯ ಪದವಿ ಮಟ್ಟದ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡುವರು. ಲಿಂಗಸುಗೂರಿನಿಂದ ಸಂಜೆ 6.30ಕ್ಕೆ ನಿರ್ಗಮಿಸಿ ರಾಯಚೂರು ನಗರಕ್ಕೆ ಆಗಮಿಸಿ, ರಾತ್ರಿ 11 ಗಂಟೆಗೆ ರಾಯಚೂರಿನಿಂದ ರೈಲು ಮಾರ್ಗವಾಗಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರಿಯ ಪಲ್ಸ್ ಪೋಲಿಯೋ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿ .ಸಭಾಂಗಣದಲ್ಲಿ ರಾಷ್ಟಿಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ನಡೆದ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆಯಲ್ಲಿ ತಾಲೂಕು ಪಂಚಾಯಿತಿ ಇ.ಓ. ಪುರುರಾಜ್ ಸಿಂಗ್ ಸೋಲಂಕಿ ಐ.ಎ.ಎಸ್. ಮಾತನಾಡಿ ಪೋಲಿಯೋ ಕಾಯಿಲೆ ಒಮ್ಮೆ ಮಗುವಿನಲ್ಲಿ ಕಾಣಿಸಿಕೊಂಡಲ್ಲಿ ಮಗು ಅಂಗವಿಕಲವಾಗುತ್ತದೆ ಅದ್ದರಿಂದ ತಾಲೂಕು ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು ರಾಷ್ಟಿಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಗಂಭಿರವಾಗಿ ಪರಿಗಣಿಸಿ.**

ತಾಲೂಕಿನ ಯಾವೊಂದು ಮಗು ಕೂಡ ಪೋಲಿಯೋ ಲಸಿಕೆಯಿಂದ ಹೊರ ಉಳಿಯದಂತೆ ಆರೋಗ್ಯ ಇಲಾಖೆಯೊಂದಿಗೆ ಸಹಕಾರ ನೀಡುವ ಮೂಲಕ ತಾಲೂಕಿನ 1ರಿಂದ 5ರ ಒಳಗಿನ ಪ್ರತಿಯೊಂದು ಮಗುವಿಗೂ ಕೂಡ ಪೋಲಿಯೋ ಲಸಿಕೆ ಹಾಕಿಸುವುದಕ್ಕೆ ಕ್ರಮ ಕೈಗೊಳ್ಳಬೇಕು ಪೋಲಿಯೋ ಲಸಿಕೆ ಹಾಕಿಸುವುದಕ್ಕೆ ನಿರಾಕರಿಸುವ ಪಾಲಕರ



ಮನವೊಲಿಸಿ ಲಸಿಕೆಯನ್ನು ಹಾಕಿಸಬೇಕು. ಹೈರಿಸ್ಕ ಇರುವ ಬೂತ್ ಗಳಲ್ಲಿ ಅಂಗನವಾಡಿ ಕಾರ್ಯಕರ್ತರನ್ನು ನೇಮಕ ಮಾಡಲಾಗುವುದು ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ತೊಂದರೆ ಉಂಟಾದಲ್ಲಿ ಕೂಡಲೆ ತಾಲೂಕು ಆಡಳಿತದ ಗಮನಕ್ಕೆ ತರಬೇಕು.

ಲಸಿಕೆಯನ್ನು ಶೀಥಿಲಕರಣ ಪೆಟ್ಟಿಗೆಯಲ್ಲಿ ಇಡಬೇಕಾಗಿರುವುದರಿಂದ ಜೆಸ್ಕಂ ಇಲಾಖೆ ಅಧಿಕಾರಿಗಳು ವಿದ್ಯುತ್ ನಿಲುಗಡೆಯಾಗದಂತೆ ಕ್ರಮ ಕೈಗೊಳ್ಳಬೇಕು, ಬಸ್ ನಿಲ್ದಾಣದಲ್ಲಿ ಮಕ್ಕಳಿಗೆ ಲಸಿಕೆ ಹಾಕುವುದಕ್ಕೆ ಕಲ್ಯಾಣ ಸಾರಿಗೆ ಇಲಾಖೆ ಅಧಿಕಾರಿಗಳು ಅಗತ್ಯ ಸೌಲಭ್ಯ ಕಲ್ಪಿಸಬೇಕು, ಗ್ರಾಮೀಣ ಭಾಗದ ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಶಾಲಾ ಮಕ್ಕಳಿಂದ ಜಾಗೃತಿ ಜಾಥ ನಡೆಸಬೇಕು, ಅಂಗನವಾಡಿ ಕಾರ್ಯಕರ್ತರು ,ಆಶಾಕಾರ್ಯಕರ್ತರು ಲಸಿಕೆ ಹಾಕುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ತಾಲೂಕು ಆರೋಗ್ಯಧಿಕಾರಿ ಡಾ.ಶರಣಬಸವರಾಜ ಮಾತನಾಡಿ ಮಾನ್ವಿ ವಿಧಾನಸಭಾ ವ್ಯಾಪ್ತಿಯಲ್ಲಿ ರಾಷ್ಟಿಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಡಿ.21 ರಂದು ಬೂತ್ ಡೆ ಅಂಗವಾಗಿ ಬೂತ್ ಗಳಲ್ಲಿ 1ರಿಂದ 5ರ ಒಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಾಗುವುದು. ಡಿ.22,23,24 ರಂದು ಪ್ರತಿ ಮನೆ ಮನೆಗೆ ಅಂಗನವಾಡಿ ಕಾರ್ಯಕರ್ತೆಯರು ಭೇಟಿ ನೀಡಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವುದಕ್ಕೆ ಕ್ರಮ ಕೈಗೊಳ್ಳಲಿದ್ದಾರೆ .ಮಾನ್ವಿ ಕ್ಷೇತ್ರದ ವ್ಯಾಪ್ತಿಯಲ್ಲಿ 5 ವರ್ಷದೊಳಗಿನ 47 ಸಾವಿರ ಮಕ್ಕಳನ್ನು ಗುರುತಿಸಲಾಗಿದ್ದು ಪೋಲಿಯೋ ಲಸಿಕೆ ಹಾಕುವುದಕ್ಕೆ ಒಟ್ಟು 221 ಬೂತ್ ಗಳ ವ್ಯವಸ್ಥೆ ಮಾಡಲಾಗಿದ್ದು442 ಸಿಬ್ಬಂದಿಗಳು 47 ಮೇಲ್ವಿಚಾರಕರು, 8 ಸಂಚಾರಿ ತಂಡಗಳ ವ್ಯವಸ್ಥೆ ಮಾಡಲಾಗಿದೆ. ಎಂದು ತಿಳಿಸಿದರು. ಸಭೆಯಲ್ಲಿ ಗ್ರೇಡ್2 ತಹಸೀಲ್ದಾರ್ ಅಬ್ದುಲ್ ವಾಹಿದ್, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ. ಸೇರಿದಂತೆ ಆರೋಗ್ಯ ಶಿಕ್ಷಣಾಧಿಕಾರಿಗಳು, ಆರೋಗ್ಯ ಸಿಬ್ಬಂದಿಗಳು ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

# ಶಿಕ್ಷಕರಿಗೆ ಅವಮಾನ ಮಾಡಿದ ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಡಿ. 3 ತಾಲೂಕ ನೌಕರರ ಸಂಘದ ಅಧ್ಯಕ್ಷ ಸಿ ಎಸ್ ಷಡಕ್ಷರಿ ಯವರು ತುಂಬಿದ ಸಭೆಯಲ್ಲಿ ಶಿಕ್ಷಕರಿಗೆ ಅವಮಾನಿಸಿದ್ದು ತಪ್ಪು , ಜ್ಞಾನಕ್ಕಿಂತ ಮಿಗಿಲಾದುದು ಜಗತ್ತಿನಲ್ಲಿ ಇನ್ನೊಂದಿಲ್ಲ.ಅಂಥ ಜ್ಞಾನದ ಗಣಿಗಳೆಂದರೆ ಶಿಕ್ಷಕರು.ಏನೂ ಬರೆಯದ ಕರಿ ಹಲಗೆಯಂತಿರುವ ಮಗುವಿನ ಮನಸ್ಸಿನ ಮೇಲೆ ಸುಜ್ಞಾನದ ಮೊದಲ ಗೆರೆ ಎಳೆಯುವವನೇ ಗುರು,ದೇವ ಸ್ವರೂಪಿ ಶಿಕ್ಷಕ,**

ಅಂಥವರಿಗೇನೇ ನಾಲೇಜ್ ಇರಲ್ಲವೆಂದು ತುಂಬಿದ ಸಭೆಯಲ್ಲಿ ದುರಹಂಕಾರದಿಂದ ಮಾತನಾಡುವ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ ಎಸ್ ಷಡಕ್ಷರಿಯವರು ಎಲ್ಲರ ಕ್ಷಮೆ ಕೇಳಬೇಕೆಂದು



ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟ (ರಿ ) ನ ಅಧ್ಯಕ್ಷ ಚಂದ್ರಶೇಖರ್ ಪಾಟೀಲ್ ಹೇಳಿದ್ದಾರೆ. ಶಿಕ್ಷಕರ ಜ್ಞಾನ ದೀಕ್ಷೆ ಇಲ್ಲದೆ ಇಷ್ಟೊಂದು ಎತ್ತರಕ್ಕೆ ಬೆಳೆದರೇ ಇವರು ಗುರುವಿಗೆ, ಗುರು ಸ್ಥಾನಕ್ಕೆ ಇಷ್ಟೊಂದು ಅಗೌರವದಿಂದ ಮಾತನಾಡಲು ಅವರಿಗೆ ವಿನಾಶಕಾಲೇ ವಿಪರೀತ ಬುದ್ಧಿಯ ಫಲ ಕಾದಿದೆಯೇ

ಈ ರಾಜ್ಯದಲ್ಲಿ ಶಿಕ್ಷಕರನ್ನು ನೋಯಿಸಿದ ಸರ್ಕಾರಗಳೇ ಉಳಿದಿಲ್ಲ ಇನ್ನು ಇವನ್ಯಾವ ಮಹಾ ಗುರುನಿಂದನೆ, ಅವಮಾನಗಳು ಅವರಿಗೆ ತಿರುಗು ಬಾಣಗಳಾಗಿ ಪರಿಣಮಿಸಿದಾಗ ಗೊತ್ತಾಗುತ್ತದೆ ಶಿಕ್ಷಕರ ಮಹಿಮೆ, ಖಂಡಿತಾ ಇದು ಉದ್ಧಟತನದ ಹೇಳಿಕೆ. ಅವರೊಳಗಿನ ಅಜ್ಞಾನದ ಸಂಕೇತ. ಅವರು ಕೂಡಲೇ ಶಿಕ್ಷಕ ಸಮುದಾಯದ ಕ್ಷಮೆ ಕೇಳಬೇಕು. ಅದೂ ತಿರುಳ್ಗನ್ನಡ ನಾಡು ಅಮೋಘ ವರ್ಷ ನೃಪತುಂಗನ ನಾಡಿನಲ್ಲಿ ಸಂಸ್ಕೃತಿಯ ಬೀಡಿನಲ್ಲಿ, ಕೊಪ್ಪಳದ ಗವಿಸಿದ್ದೇಶ್ವರನ ಸನ್ನಿಧಾನದಲ್ಲಿ ಹೀಗೆ ನಾಲಿಗೆಯನ್ನು ಹರಿಬಿಟ್ಟು ಶಿಕ್ಷಕರ ಜ್ಞಾನವನ್ನು ಅವಮಾನಿಸಿ ಮಾತನಾಡುವುದು ಕ್ಷಮಾರ್ಹವಾದುದಲ್ಲ.

ಅವರ ನಾಲಿಗೆ ಅವರ ಕುಲವನ್ನು ಹೇಳುತ್ತದೆ. ಸಮುದ್ರವನ್ನು ಕಂಡು ಇದೇನು ಮಹಾವೆಂದು ಮಾತನಾಡುವುದು ಸರಳ ಕಾರ್ಯವಲ್ಲ. ಅದರೊಳಗೆ ಸಿಕ್ಕಾಗಲೇ ಅದರ ಶಕ್ತಿ ಗೊತ್ತಾಗುತ್ತದೆ.ಷಡಕ್ಷರಿಯವರು ತಾವು ಆಡಿರುವ ತಮ್ಮ ಹೇಳಿಕೆಯನ್ನು ಹಿಂಪಡೆದು ಕೂಡಲೇ ಶಿಕ್ಷಕರ ಕ್ಷಮೆ ಕೇಳಿದರೆ ಸರಿ. ಇಲ್ಲವಾದರೆ ರಾಜ್ಯಾದ್ಯಂತ ಶಿಕ್ಷಕ ಸಮುದಾಯ ಹೋರಾಟಕ್ಕಿಳಿದು ತನ್ನ ಸಾಮರ್ಥ್ಯವನ್ನು ತೋರಿಸಬೇಕಾಗುತ್ತದೆ ಎಂದು ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

1ನೇ ಪುಟದಿಂದ....

ಈ ಹಿಂದೆ ಟೆಂಡರ್ ಪ್ರಕ್ರಿಯೆಗಳ ಅನುಮೋದನೆ, ಯೋಜನೆಗಳ ಅನುಷ್ಠಾನದ ಅನುಮೋದನೆ ಹಾಗೂ ಉದ್ಯಾನವನಗಳು, ಬೀದಿ ದೀಪಗಳು, ಕೆರೆಗಳು, ರಾಜ–ಕಾಲುವೆಗಳು, ಅಧಿಕಾರಿಗಳ ಕಛೇರಿಗಳ ನಿರ್ವಹಣೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುವ ಸಂಬಂಧದ ಕಡತಗಳಲ್ಲಿ ಪಾಲಿಕೆಯ ಆಯುಕ್ತರು ಅಂತಿಮವಾಗಿ ಒಂದು ಸಲ ಅನುಮೋದನೆ ನೀಡಿದರೆ ಸಾಕಿತ್ತು. ಆದರೆ, ವಿಚಿತ್ರ ಮತ್ತು ಹಾಸ್ಯಾಸ್ಪದ ಎಂಬಂತೆ ಈಗಿನ ಐದು ಪಾಲಿಕೆಗಳ ಆಯುಕ್ತರುಗಳಿಗೆ ಪ್ರತೀ ಕಡತವೂ ಸಹ ಕನಿಷ್ಠ ನಾಲ್ಕೈದು ಸಲ ರವಾನೆಯಾಗಿ ಆಯುಕ್ತರ ಸಹಿಗಳನ್ನು ಪಡೆದುಕೊಳ್ಳುವ ಪದ್ಧತಿ ಜಾರಿಗೆ ಬಂದಿದೆ. ಒಂದು ಹುಲ್ಲು ಕಡ್ಡಿಯೂ ಸಹ ತಮ್ಮ ಅನುಮತಿ ಪಡೆದ ನಂತರವಷ್ಟೇ ಅಲುಗಾಡಬೇಕು ಎಂಬ ಮನಸ್ಥಿತಿ ಹೊಂದಿರುವ ಒಂದಿಬ್ಬರು ಆಯುಕ್ತರು ತಮ್ಮ ಅಧಿಕಾರ ವ್ಯಾಪ್ತಿಯ ಪಾಲಿಕೆಗಳಲ್ಲಿ ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದಾರೆ, ನಗರ ಪಾಲಿಕೆಗಳ 10 ವಲಯಗಳಲ್ಲಿರುವ ಶ್ರೇಣಿಯ ಜಂಟಿ ಆಯುಕ್ತರುಗಳ ಅನುಮೋದನೆ ಕಾರ್ಯಗಳಿಗೆ ಒಂದೇ ಒಂದು ಕಡತವೂ ರವಾನೆಯಾಗುತ್ತಿಲ್ಲ ಮತ್ತು ಈ ಸಂಬಂಧದ ಅಧಿಕಾರ ಪ್ರತ್ಯಾಯೋಜನೆಯನ್ನು ಇದುವರೆಗೂ ಯಾವೊಂದು ಪಾಲಿಕೆಯಲ್ಲೂ ಹೊರಡಿಸಿಲ್ಲ. ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮ ಟಿಕೆಟ್‌ಗಳು ಹೀಗಾಗಿ ಐದು ಪಾಲಿಕೆಗಳಲ್ಲಿ ಒಂದೇ ಮಾದರಿಯ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವುದು ನಗರಾಭಿವೃದ್ಧಿ ಇಲಾಖೆ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ.ಆದುದರಿಂದ ಈ ಸಂಬಂದ ಕೂಡಲೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರನ್ನು ಆಗ್ರಹಿಸಿದ್ದಾರೆ.

# ಹನುಮಮಾಲಾಧಾರಿಗಳಿಂದ ಭವ್ಯ ಸಂಕೀರ್ತನ ಶೋಭಾ ಯಾತ್ರೆ ಹಾಗೂ ಪಲ್ಲಕ್ಕಿ ಉತ್ಸವ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದಲ್ಲಿ ವಿಶ್ವ ಹಿಂದೂ ಪರಿಷತ್ ,ಭಜರಂಗದಳ ಮಾನ್ವಿ ಘಟಕ ವತಿಯಿಂದ ಶ್ರೀ ಹನುಮಾಲಾ ಕಾರ್ಯಕ್ರಮ–2025 ಅಂಗವಾಗಿ ನಡೆದ ಭವ್ಯ ಸಂಕೀರ್ತನ ಶೋಭಾ ಯಾತ್ರೆ ಹಾಗೂ ಪಲ್ಲಕ್ಕಿ ಉತ್ಸವ ಕಾರ್ಯಕ್ರಮಕ್ಕೆ ಪಟ್ಟಣದ ವಾಸವಿ ಕಲ್ಯಾಣ ಮಂಟಪ್ಪದ ಆವರಣದಲ್ಲಿ ಜೆಡಿಎಸ್,ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ ಚಾಲನೆ ನೀಡಿ.**

ಮಾತನಾಡಿ ಪ್ರತಿ ವರ್ಷದಂತೆ ಈ ವರ್ಷ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಹನುಮಮಾಲೆಯನ್ನು ಹಾಗೂ ಅಯ್ಯಪ್ಪ ಮಾಲೆಯನ್ನುಧರಿಸಿದ ಸಾವಿರಾರು ಭಕ್ತರು ಭಕ್ತಿ ಶ್ರದ್ದೆಗಳಿಂದ ಭಾಗವಹಿಸಿದ್ದರೆ ಎಂದು ತಿಳಿಸಿದರು. ವಾಸವಿ ಕಲ್ಯಾಣ ಮಂಟಪ್ಪ ದಿಂದ ಎ.ಪಿ.



ಎಂ.ಸಿ. ಶ್ರೀ ಉದ್ಭವ ಆಂಜನೇಯ್ಯ ಸ್ವಾಮಿ ದೇವಸ್ಥಾನದ ವರೆಗೆ ಭವ್ಯ ಸಂಕೀರ್ತನ ಶೋಭಾ ಯಾತ್ರೆ ಹಾಗೂ ಪಲ್ಲಕ್ಕಿ ಉತ್ಸವ ನಡೆಯಿತು. ನಂತರ ಭಕ್ತರಿಗೆ ಅನ್ನದಾನ ಪ್ರಸಾದ ವ್ಯವಸ್ಥೆ ಮಾಡಲಾಯಿತು. ಪಟ್ಟಣದಲ್ಲಿ ವಿಶ್ವ ಹಿಂದೂ ಪರಿಷತ್ ,ಭಜರಂಗದಳ ಮಾನ್ವಿ ಘಟಕ ವತಿಯಿಂದ ಶ್ರೀ ಹನುಮಾಲಾ ಕಾರ್ಯಕ್ರಮ ಅಂಗವಾಗಿ ಭವ್ಯ ಸಂಕೀರ್ತನ ಶೋಭಾ ಯಾತ್ರೆ ನಡೆಯಿತು.

# ರಾಯಚೂರು ಜಿಲ್ಲೆಯಲ್ಲಿ ಸಚಿವರಾದ ಬಿ.ಎಸ್.ಸುರೇಶ ಪ್ರವಾಸ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 02 (ಕರ್ನಾಟಕ ವಾರ್ತೆ): ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬಿ.ಎಸ್. ಸುರೇಶ ಅವರು ಡಿಸೆಂಬರ್ 3ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.**

ಬೆಳಿಗ್ಗೆ 10 ಗಂಟೆಗೆ ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಜಿಂದಾಲ್ ಏರ್‌ಸ್ಟ್ರಿಪ್ ನಿಂದ ಹೆಲಿಕ್ಯಾಪ್ಟರ್ ಮುಖಾಂತರ ಹೊರಟು, ಬೆಳಿಗ್ಗೆ 11 ಗಂಟೆಗೆ ರಾಯಚೂರಿಗೆ ಆಗಮಿಸಲಿದ್ದಾರೆ. ಬೆಳಿಗ್ಗೆ 11 ರಿಂದ, ಯರಮರಸ್, ಮಾವಿನಕೆರೆ ಸೇರಿದಂತೆ ವಿವಿಧೆಡೆ ಭೇಟಿ ಕಾರ್ಯಕ್ರಮದ ಬಳಿಕ, ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 3 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಡಾ.ದೇವರಾಜ ಬಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಜೆಪಿ ಶಾಸಕರಿಂದ ರೈತರ ವಿವಿಧ ಬೇಡಿಕೆಗಳನ್ನು ತಕ್ಷಣವೆ ಪರಿಹರಿಸಬೇಕೆಂದು ಆಗ್ರಹಿಸಿ ಬೃಹತ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಕರ್ನಾಟಕದಲ್ಲಿ ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ರೈತರಿಗೆ, ಹೇಳತೀರದಷ್ಟು ಕಷ್ಟವಾಗಿದೆ. ಸರಕಾರವು ಅಧಿಕಾರಕ್ಕೆ ಬಂದ ದಿನದಿಂದ ಹಿಂದಿನ ಸರಕಾರ ರೈತರಿಗೆ ಕೊಡುತ್ತಿದ್ದ ಎಲ್ಲಾ ಅನುದಾನಗಳನ್ನು ಮುಂದುವರಿಸಬೇಕು, ರೈತರ ವಿವಿಧ ಬೇಡಿಕೆಗಳನ್ನು ತಕ್ಷಣವೆ ಪರಿಹರಿಸಬೇಕೆಂದು ಆಗ್ರಹಿಸಿ ಬಸ್ ನಿಲ್ದಾಣದ ಅಂಬೇಡ್ಕರ್ ವೃತ್ತದಲ್ಲಿ ಬೃಹತ ಪ್ರತಿಭಟನೆಯನ್ನು ನಡೆಸಿ ನಂತರ ತಹಸೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ ಮಾತನಾಡಿದ ಶಾಸಕ ಮಾನಪ್ಪ ಡಿ ವಜ್ಜಲ್.**

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಿಂದ, ಕೊಡುವ ವಾರ್ಷಿಕ 5 ಸಾವಿರದ ಜೊತೆ ರಾಜ್ಯ ಸರ್ಕಾರದಿಂದ 4 ಸಾವಿರ ಸೇರಿಸಿ ಕೊಟ್ಟು ರೈತರ ಕುಟುಂಬಕ್ಕೆ ಆಸರೆಯಾಗಿತ್ತು. ರೈತರ ಮಕ್ಕಳ ಉನ್ನತ ವ್ಯಾಸಂಗಕ್ಕೆ" ವಿದ್ಯಾಸಿಧಿ" ಮೂಲಕ ಸ್ಕ್ಯಾಲರ್ ಶಿಪ್ ಕೊಟ್ಟು ಸಹ ಮಾಡಿತ್ತು. ಅಮೃತ ಯೋಜನೆಯಲ್ಲಿ ರೈತರು ಸಂಘಟಿತರಾಗಿ ಸದೃಢವಾಗಲು ಈಕಔ ಸ್ಥಾಪನೆಗೆ 220 ಕೋಟಿ ಕೊಟ್ಟಿತ್ತು. ಕೇವಲ 28 ಸಾವಿರದಲ್ಲಿ



ರೈತರ ಹೊಲಗಳಿಗೆ ವಿದ್ಯುತ್ ಒದಗಿಸುತ್ತಿತ್ತು. ಸಣ್ಣ ರೈತರಿಗೆ ಸಹಾಯಧನ ನೀಡಿ ಕೃಷಿ ಪರಿಕರಗಳನ್ನು ಕೊಡಿಸುತ್ತಿತ್ತು. ಸಮರ್ಪಕ ನೀರು ನಿರ್ವಹಣೆ ಮತ್ತು ಉತ್ತಮ ಪಸಲಿಗೆ, ಬೆಂಬಲ ಬೆಲೆಯಲ್ಲಿ ಖರೀಧಿ ಕೇಂದ್ರಗಳ ಮೂಲಕ ತೊಗರಿ ಜೋಳ ಭತ್ತ ಖರೀಧಿಸಿ, ಪ್ರೋತ್ಸಾಹಧನದ ಜೊತೆ ಹಣ ಸಂದಾಯ ಮಾಡುತ್ತಿತ್ತು. ನೀವುಗಳು ಕೇವಲ ಪಂಚ ಗ್ಯಾರಂಟಿಗಳಿಗೆ ಆದ್ಯತೆ ಕೊಟ್ಟು, ರೈತ–ರಿಗೆ ಸಿಗಬೇಕಿದ್ದ ಎಲ್ಲಾ ಸೌಲತ್ತುಗಳನ್ನು ಕತ್ತರಿಸಿ, ಅವರ ಬದುಕುಗಳನ್ನು ಬೀದಿಗೆ ತಂದಿದ್ದೀರಿ.

**ನಿಮ್ಮಿಂದಾಗುತ್ತಿರುವ ಅನ್ಯಾಯಗಳು:**

1.ತುಂಗಭದ್ರಾ ಡ್ಯಾಮ್ ನಲ್ಲಿ 80 ಖಿಒಅ ನೀರಿದ್ದರೂ, ಎರಡನೇ ಬೆಳೆಗೆ ನೀರು ಒದಗಿಸುತ್ತಿಲ್ಲ.
2. ಕೃಷಿ ಇಲಾಖೆಯ ಸಹಾಯಧನಕ್ಕೆ ಮೀಸಲಿಡಬೇಕಾದ ಹಣವಿಡದೆ, ರೈತ–ರಿಗೆ ತೊಂದರೆ ಕೊಟ್ಟಿದ್ದೀರಿ.
3.ವಾರ್ಷಿಕ 4000/–ವನ್ನು, ಸಮ್ಮಾನ ನಿಧಿಯ ಜೊತೆ ಕೊಡುತ್ತಿಲ್ಲ ವಿದ್ಯಾನಿಧಿ ತೆಗೆದಿದ್ದೀರಿ.
4.ಅಂಗಸಗೂರು ತಾಲೂಕಿನ ಕೃಷಿ ಸಹಾಯಕ ನಿರ್ದೇಶಕರ ಕಛೇರಿಯನ್ನು ನಮ್ಮ ಲಿಂಗಸಗೂರಿನಿಂದ ಸಿಂಧನೂರಿಗೆ ಸ್ಥಳಾಂತರವನ್ನು ರದ್ದು ಪಡಿಸುವುದು.
5.ಸಕಾಲದಲ್ಲಿ ಖರೀಧಿ ಕೇಂದ್ರ ಸ್ಥಾಪಿಸದೆ ಅನ್ಯಾಯ ಮಾಡಿದ್ದೀರಿ.
6.ಬೆಂಬಲ ಬೆಲೆಯಲ್ಲಿ ಕೊಂಡುಕೊಂಡು ಧಾನ್ಯದ ಹಣವನ್ನು ಸರಿಯಾಗಿ ಸಂದಾಯ ಮಾಡಿಲ್ಲ.

ಹಕ್ಕೊತ್ತಾಯಗಳು.

1. ಖಿಐಃಅ ಯಿಂದ ಎರಡನೇ ಬೆಳೆಗೆ ನೀರು ಕೊಡಿ. ಆದಾಗದಿದ್ದರೆ ಪ್ರತಿ ಎಕರೆಗೆ ರೂ.25000/– ಪರಿಹಾರ ಕೊಡಿ.
2.ಅತಿವೃಷ್ಟಿಗೆ ತುತ್ತಾದ, ಸಮೀಕ್ಷೀತ ಬೆಳೆಗಳಿಗೆ ರಾಜ್ಯದಿಂದ ಪರಿಹಾರ ಕೊಡಿ.
3.ತುಂಗಭದ್ರ ಆಣೆಕಟ್ಟು ವ್ಯಾಪ್ತಿಯಲ್ಲಿ ಪ್ರತಿ ಎಕರೆಗೆ 50 ಚೀಲ ಭತ್ತ ಬರುತ್ತಿತ್ತು ಹವಮಾನ ವೈಪರತ್ಯದಿಂದ ಭತ್ತಕ್ಕೆ ವೈರಸ ರೋಗ ಬಂದು ಇಂದು ಕೇವಲ 20 ರಿಂದ 25ಚೀಲ ಬಂದಿದೆ, ಈ ಭಾಗದ ರೈತ–ರಿಗೆ ವಿಶೇಷ ಪರಿಹಾರ ಪ್ಯಾಕೇಜ ಘೋಷಿಸಬೇಕು.
4.ರೈತರಿಗೆ ಉಚಿತ ವಿದ್ಯುತ್ ಸಂಪರ್ಕ ಕೊಡಿ.
5.ಹಾಲಿಗೆ ಸಹಾಯಧನ ಹೆಚ್ಚಿಸಿ.
6. ಸಕಾಲದಲ್ಲಿ ತೊಗರಿ, ಜೋಳ, ಭತ್ತ ಮತ್ತು ಮೆಕ್ಕೆಜೋಳ ಖರೀಧಿ ಕೇಂದ್ರ ಸ್ಥಾಪಿಸಿ. ರೈತರು ಬೆಳೆದಷ್ಟನ್ನು ಕೊಂಡುಕೊಳ್ಳಿ.
7.ಮುದ್ರಾಂಕ ಶುಲ್ಕ ಕಡಿಮೆ ಮಾಡಿ.
8. ಎಪಿಎಂಸಿ ಯಲ್ಲಿ ನಡೆಯುತ್ತಿರುವ ಅನ್ಯಾಯವನ್ನು ತಡೆಗಟ್ಟಿ, ತಪ್ಪಿತಸ್ತರನ್ನು ಕಾನೂನು ಶಿಸ್ತಿಗೆ ಒಳಪಡಿಸಿ.
9.CCI ಯಿಂದ ಹತ್ತಿ ಖರೀಧಿಗೆ ಬೇಕಿರುವಷ್ಟು ಮಿಲ್ಲುಗಳನ್ನು ಒದಗಿಸಿ.
10.ಅತಿವೃಷ್ಟಿ ಮತ್ತು ಹವಾಮಾನ ವೈಪ–ರಿತ್ಯದಿಂದ ತತ್ತರಿಸುವ ದಾಳಿಂಬೆ ಬೆಳೆಗಾರ–ರಿಗೆ ನೆರವಿಗೆ ದಾವಿಸಿ ಪರಿಹಾರ ಒದಗಿಸಬೇಕು.

ರೈತರಿಗೆ, ತಮ್ಮಿಂದ ಆಗುತ್ತಿರುವ ಅನ್ಯಾಯವನ್ನು ನಾವು ಮತ್ತು ಅಮಾಯಕ ರೈತರು ಸಹಿಸಲು ಸಾಧ್ಯವಿಲ್ಲ. ತಕ್ಷಣವೇ ತಪ್ಪು ತಿದ್ದಿಕೊಂಡು, ರೈತರಿಗೆ ನ್ಯಾಯ ಕೊಡಿ ಇಲ್ಲದಿದ್ದರೆ ತಮ್ಮನ್ನು ಅಧಿಕಾರದಿಂದ ಕೆಳಗೆ ಇಳಿಸುವವರೆಗೂ ನಿರಂತರ ಹೋರಾಟ ಮಾಡುತ್ತೇವೆಂದರು . ಈ ಸಂದರ್ಭದಲ್ಲಿ ಯಂಕನಗೌಡ ಪಾಟೀಲ್ ಐದನಾಳ ಅಧ್ಯಕ್ಷರು, ಭಾ.ಜ.ಪಾ ರೈತ ಮೋರ್ಚಾ, ಕೆ.ನಾಗಭೂಷಣ ಅಧ್ಯಕ್ಷರು. ಭಾರತೀಯ ಜನತಾ ಪಾರ್ಟಿ , ವೀರನಗೌಡ ಲೆಕ್ಕಿಹಾಳ್ ಜಿಲ್ಲಾಧ್ಯಕ್ಷ ಭಾರತೀಯ ಜನತಾ ಪಾರ್ಟಿ ಎಲ್ಲಾ ಮುಖಂಡರು ಸೇರಿದಂತೆ ಇದ್ದರು.